# HIGH COURT OF KARNATAKA
ಕರ್ನಾಟಕ ಉಚ್ಚ ನ್ಯಾಯಾಲಯ

## CIVIL JUDGE MAIN WRITTEN EXAMINATION-2019
ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ – 2019

## LAW PAPER I
ಕಾನೂನು ಪತ್ರಿಕೆ – I

Date: 30.03.2019
ದಿನಾಂಕ: 30ನೇ ಮಾರ್ಚ್ 2019

Max Marks: 100
ಗರಿಷ್ಠ ಅಂಕಗಳು: 100

Time: 2.00 PM to 5.00 PM
ಸಮಯ: ಮಧ್ಯಾಹ್ನ 2.00 ರಿಂದ 5.00 ಗಂಟೆ

**Instructions:**

1. Option is given to the candidates to write answers either in English or in Kannada

ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ.

2. If there is any discrepancy in the question in English language and Kannada language, the questions as framed in English language shall prevail.

ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ

3. Write your register number only on the cover page in the space provided and nowhere else. You must not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

ನಿಮ್ಮ ರಿಜಿಸ್ಟರ್ ನಂಬರನ್ನು ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

## Part I
## ಭಾಗ – 1

### The Code of Civil Procedure, 1908 and Principles of pleadings
### ದಿವಾಣಿ ಪ್ರಕ್ರಿಯಾ ಸಂಹಿತೆ, 1908 ಮತ್ತು ದಾವಾ ಪ್ರತಿದಾವಾ ಪತ್ರಗಳ ತತ್ವಗಳು

**1. Write short notes on Any Two of the following questions**
ಈ ಕೆಳಗಿನ ಪ್ರಶ್ನೆಗಳ ಪೈಕಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ. **5 x 2=10**

a) Set off and Counter Claim
ವಜಾವಟ್ಟು ಮತ್ತು ಎದುರು ಹಕ್ಕು (ಪ್ರತಿಹಕ್ಕು ಮಂಡನೆ)

b) Ex-parte decree
ಏಕಪಕ್ಷೀಯ ಡಿಕ್ರಿ

c) Arrest before judgment
ತೀರ್ಪಿನ ಪೂರ್ವದ ದಸ್ತಗಿರಿ

**Answer Any Two of the following questions in this part.**
ಈ ಭಾಗದ ಕೆಳಗಿನ ಪ್ರಶ್ನೆಗಳ ಪೈಕಿ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ. **10 x 2=20**

2. What are the guiding principles for grant of temporary injunction under Order XXXIX Rule 1 and 2 of the Code of Civil Procedure, 1908? Whether the defendant can file application seeking temporary injunction in the suit filed by the plaintiff for permanent prohibitory injunction?

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಲು ಇರುವ ಮಾರ್ಗದರ್ಶಿ ತತ್ವಗಳು ಯಾವುವು? ಶಾಶ್ವತ ನಿರ್ಬಂಧಕಾಜ್ಞೆಗಾಗಿ ವಾದಿ ಮಾಡಿದ ದಾವೆಯಲ್ಲಿ ಪ್ರತಿವಾದಿ ತಾತ್ಕಲಿಕ ನಿರ್ಬಂಧಕಾಜ್ಞೆಯನ್ನು ಕೋರಿ ಅರ್ಜಿ ಸಲ್ಲಿಸಬಹುದೇ?

3. What is the difference between *res subjudice* as provided under Section 10 and *res judicata* as provided under Section 11 of the Code of Civil Procedure, 1908?

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 10 ರಡಿಯಲ್ಲಿ ಉಪಬಂಧಿಸಿದ *ರೆಸ್ ಸಬ್‌ಜುಡೈಸ್* ಮತ್ತು ಕಲಂ 11 ರಡಿಯಲ್ಲಿ ಉಪಬಂಧಿಸಿದ *ರೆಸ್ ಜುಡಿಕೇಟ* ಇವುಗಳ ನಡುವೆ ಇರುವ ವ್ಯತ್ಯಾಸವೇನು?

4. Discuss the provisions of the Code of Civil Procedure, 1908 regarding the issue of commissions.

ಕಮಿಷನ್ ನೀಡುವ ಬಗ್ಗೆ ದಿವಾಣಿ ಪ್ರಕ್ರಿಯಾ ಸಂಹಿತೆ, 1908ರಲ್ಲಿ ಹೇಳಿದ ನಿಬಂಧನೆಗಳನ್ನು ಚರ್ಚಿಸಿ.

## Part II

**ಭಾಗ – 2**

## The Code of Criminal Procedure, 1973
ಅಪರಾಧ ಪ್ರಕ್ರಿಯಾ ಸಂಹಿತೆ, 1973

**5. Write short notes on Any Two of the following questions**
ಈ ಕೆಳಗಿನ ಪ್ರಶ್ನೆಗಳ ಪೈಕಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ. **5 x 2=10**

a) Relevance of statements recording under Section of 313 of the Code of Criminal Procedure, 1973.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 313 ರಡಿಯಲ್ಲಿರುವ ಹೇಳಿಕೆಗಳನ್ನು ದಾಖಲಿಸುವ ಸುಸಂಬದ್ಧತೆ

b) Forfeiture of bond under the Code of Criminal Procedure, 1973.

ಅಪರಾಧ ಪ್ರಕ್ರಿಯಾ ಸಂಹಿತೆ, 1973 ರಡಿಯಲ್ಲಿ ಮುಚ್ಚಳಿಕೆಯ ಮುಟ್ಟುಗೋಲು.

c) Disposal of property under Section 451 and 452 of the Code of Criminal Procedure, 1973.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 451 ಮತ್ತು 452 ರಡಿಯಲ್ಲಿ ಸ್ವತ್ತಿನ ವಿಲೇವಾರಿ.

**Answer Any Two of the following questions in this part.**
ಈ ಭಾಗದ ಕೆಳಗಿನ ಪ್ರಶ್ನೆಗಳ ಪೈಕಿ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ. **10 x 2=20**

6. Explain the circumstances in which a wife is entitled to claim maintenance from her husband under the Code of Criminal Procedure, 1973. Can a daughter be asked to maintain her father? If so, under what circumstances?

ಅಪರಾಧ ಪ್ರಕ್ರಿಯಾ ಸಂಹಿತೆ, 1973 ರಡಿಯಲ್ಲಿ ಗಂಡನಿಂದ ಜೀವನಾಂಶ ಕೇಳಲು ಪತ್ನಿಗೆ ಇರುವ ಸಂದರ್ಭಗಳನ್ನು ವಿವರಿಸಿ. ತಂದೆಯ ಪೋಷಣೆ ಮಾಡಲು ಮಗಳನ್ನು ಕೇಳಬಹುದೇ? ಹಾಗಿದಲ್ಲಿ ಯಾವ ಸಂದರ್ಭಗಳಲ್ಲಿ ಕೇಳಬಹುದು?

7. State the law of remand prescribed under Section 167 of the Code of Criminal Procedure, 1973.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 167 ರಡಿಯಲ್ಲಿ ನಿಯಮಿಸಿದ ಬಂಧನಕ್ಕೆ ಕಳುಹಿಸುವ ಕಾನೂನನ್ನು ಹೇಳಿ.

8. For every distinct offence of which any person is accused there shall be separate charge, and every such charge shall be tried separately. Discuss. Is there any exception to this rule?

ಯಾವುದೇ ವ್ಯಕ್ತಿಯು ಆರೋಪಿಯಾಗಿರುವ ಪ್ರತಿಯೊಂದು ವಿಶಿಷ್ಟ ಅಪರಾಧಕ್ಕಾಗಿ ಒಂದು ಪ್ರತ್ಯೇಕವಾದ ಆರೋಪಣೆಯು ಇರತಕ್ಕದ್ದು ಮತ್ತು ಪ್ರತಿಯೊಂದು ಅಂತಹ ಆರೋಪಣೆಯನ್ನು ಪ್ರತ್ಯೇಕವಾಗಿ ಅಧಿವಿಚಾರಣೆಗೆ ಗುರಿಪಡಿಸತಕ್ಕದ್ದು. ಚರ್ಚಿಸಿ. ಈ ನಿಯಮಕ್ಕೆ ಅಪವಾದಗಳು ಇವೆಯೇ?

## Part III
ಭಾಗ – 3

### The Indian Evidence Act, 1872
ಭಾರತೀಯ ಸಾಕ್ಷ್ಯ ಅಧಿನಿಯಮ, 1872

**9. Write short notes on Any Two of the following questions.**
ಈ ಕೆಳಗಿನ ಪ್ರಶ್ನೆಗಳ ಪೈಕಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ. **5 x 2=10**

a) Facts in issue and relevant facts
ವಿವಾದ್ಯ ಸಂಗತಿಗಳು ಮತ್ತು ಸುಸಂಬದ್ಧ ಸಂಗತಿಗಳು

b) Testimony of an accomplice
ಸಹಾಪರಾಧಿಯ ಸಾಕ್ಷ್ಯ

c) Judicial confession and extra judicial confession
ನ್ಯಾಯಿಕ ತಪ್ಪೊಪ್ಪಿಗೆ ಮತ್ತು ನ್ಯಾಯಿಕೇತರ ತಪ್ಪೊಪ್ಪಿಗೆ

**Answer Any One of the following questions in this part.**
ಈ ಭಾಗದ ಕೆಳಗಿನ ಪ್ರಶ್ನೆಗಳ ಪೈಕಿ ಒಂದು ಪ್ರಶ್ನೆಗೆ ಉತ್ತರಿಸಿರಿ. **10 x 1=10**

10. What is estoppel? State different kinds of estoppel.
ಸ್ವಯಂಕೃತ ಪ್ರತಿಬಂಧ ಎಂದರೇನು? ಸ್ವಯಂಕೃತ ಪ್ರತಿಬಂಧದ ಹಲವಾರು ವಿಧಗಳು ಯಾವುವು?

11. What is presumption? State the provisions regarding presumptions as to abetment of suicide by a married woman and dowry death.

ಪೂರ್ವಭಾವನೆ ಎಂದರೇನು? ವಿವಾಹಿತ ಮಹಿಳೆಯ ಆತ್ಮಹತ್ಯೆಯ ದುಷ್ಪ್ರೇರಣೆ ಮತ್ತು ವರದಕ್ಷಿಣೆ ಸಾವಿನ ಪೂರ್ವಭಾವನೆ ಇವುಗಳ ನಿಬಂಧನೆಗಳ ಕುರಿತು ತಿಳಿಸಿ.

## Part IV
ಭಾಗ – 4

### The Constitution of India
ಭಾರತ ಸಂವಿಧಾನ

**12. Write short notes on Any Two of the following questions**
ಈ ಕೆಳಗಿನ ಪ್ರಶ್ನೆಗಳ ಪೈಕಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ. **5 x 2=10**

a) Habeas corpus
ಬಂಧಿ ಪ್ರತ್ಯಕ್ಷೀಕರಣ

b) Fundamental duties
ಮೂಲಭೂತ ಕರ್ತವ್ಯಗಳು

c) Preamble of the Constitution of India
ಭಾರತ ಸಂವಿಧಾನದ ಪೀಠಿಕೆ

**Answer Any One of the following questions in this part.**
ಈ ಭಾಗದ ಕೆಳಗಿನ ಪ್ರಶ್ನೆಗಳ ಪೈಕಿ ಒಂದು ಪ್ರಶ್ನೆಗೆ ಉತ್ತರಿಸಿರಿ. **10 x 1=10**

13. Discuss the power of the President to proclaim an emergency. What changes have been brought in this respect by the Constitution 44th Amendment Act?

ರಾಷ್ಟ್ರಪತಿಯ ತುರ್ತು ಪರಿಸ್ಥಿತಿ ಘೋಷಣೆಯ ಅಧಿಕಾರದ ಬಗ್ಗೆ ಚರ್ಚಿಸಿ. ಭಾರತ ಸಂವಿಧಾನದ 44ನೇ ತಿದ್ದುಪಡಿಯಲ್ಲಿ ಈ ಬಗ್ಗೆ ಏನು ಬದಲಾವಣೆಯನ್ನು ತರಲಾಯಿತು?

14. Describe the procedure for carrying out amendments in the Constitution of India? Can fundamental rights be amended?

ಭಾರತ ಸಂವಿಧಾನದಲ್ಲಿ ತಿದ್ದುಪಡಿ ಮಾಡುವ ಪ್ರಕ್ರಿಯೆ ಬಗ್ಗೆ ವಿವರಿಸಿ. ಮೂಲಭೂತ ಹಕ್ಕುಗಳನ್ನು ತಿದ್ದುಪಡಿ ಮಾಡಬಹುದೇ?

********

# HIGH COURT OF KARNATAKA
ಕರ್ನಾಟಕ ಉಚ್ಚ ನ್ಯಾಯಾಲಯ

## CIVIL JUDGE MAIN WRITTEN EXAMINATION-2019
ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ – 2019

## LAW PAPER II
ಕಾನೂನು ಪತ್ರಿಕೆ – II

**Framing of Issues and writing Judgment in Civil Case**
ಸಿವಿಲ್ ಪ್ರಕರಣಗಳಲ್ಲಿ ವಿವಾದಾಂಶ ರೂಪಿಸುವುದು ಮತ್ತು ತೀರ್ಪು ಬರೆಯುವುದು

Date: 31.03.2019
ದಿನಾಂಕ: 31ನೇ ಮಾರ್ಚ್ 2019

Time: 10.00 AM to 1.00 PM
ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ

Max. Marks: 100
ಗರಿಷ್ಠ ಅಂಕಗಳು: 100

**Instructions:**

1. Option is given to the candidates to write answers either in English or in Kannada.

   ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ.

2. If there is any discrepancy in the questions in English language and Kannada language, the questions as framed in English language shall prevail.

   ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

3. Write your register number only on the cover page in the space provided and nowhere else. You must not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

   ನಿಮ್ಮ ರಿಜಿಸ್ಟರ್ ನಂಬರನ್ನು ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

**1. Frame proper issues in the following case.** **Marks:10**

**OS No.102/2013**

**Plaintiffs:** 1) Mahesha H M
2) Sudheer H M

Vs

**Defendant:** Nagesha H M

Suit is filed on 12.06.2013

**Plaint**

1. The defendant is the elder brother of Plaintiff No.1 and 2. The father of the plaintiffs H.M.Anantharamaiah died on 28.10.1968 leaving behind him the plaintiffs and defendant as his legal heirs. The mother of the plaintiffs and defendant Smt.Umavathi died on 30.03.1996. After the death of H.M.Anantharamaih, both the plaintiffs and defendant succeeded to the properties of the deceased. The plaintiffs and defendant are living in joint family and suit properties are their joint family properties. Earlier, the suit item No.1 and 2 properties stood in the name of the father of the plaintiffs and defendant and item No.2 is an agricultural land, even now standing in the name of the father of the plaintiffs and defendant. The suit item No.3 property was purchased in the name of plaintiff No.2 on 23.10.1982 when he was minor by his mother as natural guardian. Suit item No.4 property was allotted by the Municipality in the name of mother of the plaintiffs and possession was delivered to her and after her death, they have succeeded to the said property. The suit item No.6 and 7 properties are standing in the name of plaintiff No.1 and defendant. The plaintiffs are entitled 1/3rd share

each in the suit properties. But the defendant did not heed the request of the plaintiffs to partition the suit properties and allot their shares. Now the defendant is trying to alienate the suit properties. Hence, this suit is filed for partition.

2. The cause of action arose on 28.10.1968 and 30.03.1996 within the jurisdiction of this Court.

3. Wherefore, the plaintiffs pray that the Hon'ble Court may be pleased to pass a judgment and decree in favour of the plaintiffs:

(a) For partition of the suit schedule properties and to allot the plaintiffs' 1/3rd share each in the suit schedule properties.

(b) For costs and such other and further reliefs as the Court deems fit to grant in the facts and circumstances of the case.

**Written statement of defendant**

1. The suit is false, frivolous and not maintainable.
2. The plaintiffs are not entitled for the reliefs claimed in the above suit. The plaintiffs are entitled to claim right in the joint family properties only. But all the properties are not the joint family properties.
3. The defendant has contended that his father was doing vegetable business in the market and after his death, he continued the said business and he suffered loss in the business.
4. The defendant has contended that the plaintiff No.2 has not assisted him in continuing the business. The plaintiff No.2 is residing in suit item No.1 property.

5. The plaintiffs have not included 2 items of properties in the above suit i.e., site No.9 in Sy.No.43 measuring 60 x 40 feet situated at Marenahalli Village and house property bearing No.336/18 situated at Marenahalli Village.

6. The defendant has contended that during the life time of his mother Smt.Umavathi i.e., on 16.03.1990, there was partition in the family by registered partition deed and the properties were allotted to all the family members and question of partitioning the family properties once again does not arise.

Hence, the defendant prayed for dismissal of suit.

2. **Frame proper issues in the following case.** **Marks:10**

**OS No.10/2013**

**Plaintiff:** Sharada
Vs
**Defendant:** Narayan

Suit is filed on 14.04.2013

**Plaint**

1. The plaintiff has purchased 1 acre 3 guntas of land in Sy.No.130 situated at Megara Village, K.M.Pura Taluk, from Rachaiah under sale deed dated 6.8.1980. Subsequent to the sale, katha of Sy.No.130 had been changed in the name of plaintiff and she had been in possession and enjoyment of the said survey number property. Out of 1 acre 3 guntas of land in Sy.No.130, the plaintiff sold 21 guntas of land to one Kaverappa under sale deed dated 9.10.1995 and 10 guntas of land to one Jaganatha under sale deed dated 16.8.1996 and 5 guntas of land to one C.Ramu under

sale deed dated 16.8.1996 and retained 7 guntas of land in Sy.No.130 morefully described in the schedule.

2. The defendant claims that he owns property on the western side of plaint schedule property which is in Sy.No.129. The defendant is trying to encroach upon the suit property and on 2.4.2013, the defendant came with the supporters and tried to assume wrongful possession of the suit schedule property by denying the title of the plaintiff. Hence, the plaintiff filed this suit for declaration and permanent injunction.

3. The cause of action arose on 2.4.2013, within the jurisdiction of this Court.

4. Wherefore, the plaintiff prays that the Hon'ble Court may be pleased to pass a judgment and decree in favour of the plaintiff:

(a) For declaration that the plaintiff is the absolute owner in possession and enjoyment of the suit property.

(b) For permanent injunction restraining the defendant from interfering with the peaceful possession and enjoyment of the suit property by the plaintiff.

(c) For costs and such other and further reliefs as the Court deems fit to grant in the facts and circumstances of the case.

**Written statement of defendant**

1. The suit filed by the plaintiff is false and not maintainable.

2. The defendant submits that Sy.No.130, 142, 160/5 of Megara Village, K.M.Pura Taluk is not phoded. The property bearing Sy.No.130 of Megara Village was purchased by the plaintiff from

Rachaiah under sale deed dated 6.8.1980 and all these properties were bounded on East: land of Chowdappa, West: Channel and Megara Village gadi, South: water channel and land in Sy.No.131 and North: Megara tank bund.

3. The plaintiff sold a portion of property under sale deed dated 9.10.1995 to Kaverappa with the boundaries on the East land retained by the plaintiff, West: land of Sy.No.129 sold to Chandrashekar, South: land of Parvathi and North: Megara tank bund. The said Kaverappa sold the said property to one M.Manjesh under sale deed dated 15.6.1997

4. The defendant has contended that he is a GPA holder of M.Manjesh and he is in possession and enjoyment of the land purchased by M.Manjesh. No lands were retained by the plaintiff either in Sy.No.130 or in any other survey numbers. The property shown in the plaint schedule is fictitious property.

5. Suit valuation is incorrect and court fee paid is insufficient. Hence, the defendant prays for dismissal of suit.

**3. Write a considered Judgment on the basis of oral and documentary evidence by giving valid and cogent reasons**

**Marks: 80**

**<u>In the Court of Civil Judge, K.M.Pura</u>**
**<u>OS 25/2006</u>**

**<u>Plaint</u>**

Between:

Rajanna, S/o Venkanna
Aged 55 years
Megara Village
K.M.Pura ----Plaintiff

**Vs**

Mahadeva S/o Ramadeva
Aged 60 years
Megara Village
K.M.Pura ---- Defendant

Plaint Under Section 26 and Order VII Rule 1 of the Code of Civil Procedure, 1908

The Plaintiff begs to Submit as under:-

1. The addresses of the parties for the purpose of summons, notices, etc., are as stated in the cause title above.

2. The plaintiff was a tenant under the defendant in possession of residential House bearing No.5 of K.M.Pura.

3. On 25.3.2003, the plaintiff surrendered vacant possession of the above said premises to the defendant. At the time of surrendering possession to the defendant, the defendant has repaid a sum of Rs.20,000/- to the plaintiff out of advance amount of Rs.1,00,000/- received by him under rent advance receipt dated 24.8.2001. On 25.3.2003, the defendant has agreed to pay the balance amount of Rs.80,000/- on monthly installments of Rs.10,000/- each in eight installments and has also agreed to pay the interest at the rate of 12% per annum in case he failed to pay the installments regularly. To this effect, the defendant had executed an acknowledgement of debt on 25.3.2003 and had further executed deed of agreement on 2.4.2003.

4. Subsequently, the defendant had failed and neglected to make the payments inspite of repeated requests, demands and registered notice. Hence the suit.

5. Now the defendant is due to the plaintiff as under:

| | |
|---|---|
| (a) Balance of rent advance | Rs. 80,000/- |
| (b) Interest @ 12% p.a. | Rs. 28,800/- |
| Total | Rs.1,08,800/- |

6. The cause of action for the suit arose on the date of acknowledgement of debt and agreement and subsequently within the jurisdiction of this Hon'ble Court. The suit is in time.

7. The suit is valued at Rs.1,08,800/- and court fee of Rs.7,241/- is paid on the plaint.

WHERFORE, the plaintiff prays for a Judgment and decree against the defendant for a sum of Rs.1,08,800/- with court costs and current and future interest at 12% p.a. and to grant such other reliefs as deemed fit in the circumstances of the case in the interest of justice and equity.

sd/-
Advocate of Plaintiff
Date: 24.3.2006

sd/-
Plaintiff

**Written Statement filed under Order VIII Rule 1 of the Code of Civil Procedure, 1908 on behalf of the defendant**

The defendant begs to submit as under:

1. It is true that the plaintiff has vacated and delivered the possession of the premises in question to this defendant. But the further allegation is false. The defendant has refunded the entire advance amount of Rs.1,00,000/- to the plaintiff. Therefore, he is not due to pay any amount to the plaintiff.

2. The defendant had never agreed to pay any amount to the plaintiff nor any interest as alleged in the plaint.

3. The plaintiff had requested the defendant to give a receipt for having delivered possession of the premises. Accordingly, the defendant had agreed and signed the receipts which were in English. The defendant does not know to read or write English language. The plaintiff has obtained the signatures of the defendant by fraud and false representation. Therefore, the documents mentioned in the plaint do not bind the defendant. The plaintiff has misused the innocence and ignorance of the defendant.

4. There is no cause of action for the suit. The suit is not in time and it is barred by limitation.

5. All the other allegations in the plaint which are not specifically traversed herein, are false and denied.

6. The defendant is not liable to pay any amount to the plaintiff. The suit as brought is not maintainable.

7. As the plaintiff has filed the suit knowing it to be false, the defendant may be awarded exemplary costs.

**WHEREFORE,** the defendant prays that this Hon'ble Court be pleased to dismiss the suit of the plaintiff with exemplary costs in the interest of justice.

| | | |
|---|---|---|
| | Sd/- | Sd/- |
| Date: 29.05.2006 | Advocate for defendant | Defendant |

I, the above named defendant do hereby declare that all statement made herein above are all true and correct to the best of my knowledge, belief and information.

K.M.Pura
Date:29.05.2006

Sd/-
Defendant

**ISSUES**

1. Whether the defendant proves that he has refunded the entire advance amount of Rs.1,00,000/- to the plaintiff?
2. Whether the plaintiff proves that the defendant had agreed to pay Rs.80,000/- with interest thereon at 12% per annum to the plaintiff?
3. Whether the defendant proves that the plaintiff had obtained his signatures on the acknowledgment of debt dated 25.3.2003 and agreement dated 2.4.2003 by misrepresentation and fraud?
4. Whether the suit is barred by limitation?
5. Whether the plaintiff is entitled for the reliefs claimed in the suit?
6. What order or decree?

**EVIDENCE**

**PW1:**

**Affidavit filed by the plaintiff in lieu of examination-in-chief**

I, Rajanna S/o Venkanna, aged 55 years, Megara Village, K.M.Pura, do hereby solemnly affirm and states as under:

1. I say that I am the plaintiff in the above suit. I say that the contents of the plaint filed by me may be read as part of the affidavit.

2. I say that I know the defendant, as I was his tenant relating to his residential premises and I had vacated the said house during 2003. I say that on the date, I had surrendered possession of the house to the defendant, he had repaid only a sum of Rs.20,000/-. I say that the defendant was still due to me another sum of Rs.80,000/- and in that behalf the defendant had executed an acknowledgement of debt. I say that the defendant has promised to pay the amount in monthly installments of Rs.10,000/- each, but did not pay even a single installment.

3. I say that the defendant had executed deed of agreement on 2.4.2003. I say that the defendant had agreed to pay interest at the rate of 12% per annum if he fails to pay the amount.

Identified by:
Sd/-
(Advocate)

Sd/-
Deponent

**Further examination-in-chief by the Advocate for plaintiff:**

I have filed affidavit in lieu of chief examination and I have signed the affidavit. The contents of the affidavit are true. I have produced the Rent advance receipt marked as Ex.P1. I have produced an acknowledgement of debt marked as Ex.P2 and deed of agreement marked as Ex.P3.

**Cross Examination by Advocate for defendant:**

I had paid Rs.1,00,000/- to the defendant. I do not remember whether I have made payment by cash or cheque. It is false to suggest that I had vacated the house of defendant after giving him lot of trouble. It is false to suggest that after some well wishers intervened and prevailed upon me, I had vacated the house. It is false to suggest that the defendant had refunded the entire sum of Rs.1,00,000/- to me when I had vacated the house. It is false to suggest that since I was compelled to vacate the house, I have created Ex.P2 and Ex.P3 with an intention to wreak vengeance on the defendant. It is false to suggest that I took signatures of the defendant to Ex.P2 and P3 by misrepresenting that it was only a receipt for having obtained possession of his house from me and that I had played fraud on him. I do not know whether the defendant knows to read and write English.

**Re-examination: Nil**

R.O.I & A.C.
Sd/-
Civil Judge

**DW1:**

**Affidavit in lieu of examination-in-chief filed by the Defendant**

I, Mahadeva S/o Ramadeva, aged 60 years, Megara Village, K.M.Pura, do hereby solemnly state and affirms on oath as follows:

1. I say that I know the plaintiff. I say that he had taken my house on lease. I say that he had paid an advance of Rs.1,00,000/-.

2. I say that I had leased out the house to the plaintiff about five years back. I was then in a rented house. I had vacated the same due

to the pressure of my landlord. Therefore, I had asked the plaintiff to vacate my house. Plaintiff vacated my house three years back and I have been residing therein since three years. I had vacated my rented house four days prior to plaintiff vacating my house.

3. I say that a day prior to plaintiff vacating my house, I had refunded the sum of Rs.1,00,000/- to him.

4. I say that I cannot read or write English. I had not entered into any agreement with plaintiff, though Ex.P3 purports to be an agreement and it bears my signature. I was asked to sign in token of my having got back possession of the house from the plaintiff. The contents of the alleged agreement were not read over and explained to me.

5. I say that as the suit is filed with vengeance knowing it to be false, the same may be dismissed with exemplary costs.

Identified by:
Sd/-
(Advocate)

Sd/-
Deponent

**Further examination-in-chief by the Advocate for defendant:**

I have filed affidavit in lieu of chief examination and I have signed the said affidavit. The contents of the affidavit are true.

**Cross examination by the Advocates for Plaintiff:**

Now I see the advance receipt dated 24.8.2001 which is Ex.P1. It bears my signature as per Ex.P1(a). I have document to show the payment of Rs.1,00,000/- to the plaintiff as I had received the rent advance from my own tenant relating to my newly constructed third floor. It is true that Ex.P2 dated 25.3.2003 bears my signature, but I

did not undertake to pay any balance of Rs.80,000/- there under. It is false to suggest that I had entered into deed of agreement with plaintiff as per Ex.P3. But it bears my signature which is at Ex.P3(a). I do not have a copy of Ex.P3. I do not know any of the attestors of Ex.P3. It is false to say that I had refused to accept the legal notice. My address on the cover, which is now marked as Ex.P4 is correct. It is false to suggest that I am due to pay Rs.80,000/- to the plaintiff towards rent advance and Rs.28,800/- towards interest thereon.

Re-examination: Nil

R.O.I & A.C.
Sd/-
Civil Judge

**DW2:**

**Affidavit in lieu of examination-in-chief filed by the witness**

I, Marappa S/o Devappa, aged 41 years, residing at Shankarapura, do hereby solemnly state and affirm on oath as follows:

1. I say that I know the plaintiff. I was purchasing cement from the shop of plaintiff.

2. I say that on 2.4.2003, I had visited my daughter's house at Megara Village and had stayed over night. On that day, I was proceeding to market at about 7.00 p.m. As I was passing by the side of the shop of plaintiff, I was called by the plaintiff. He had told me that he had taken the house of defendant on rent and he had vacated it. I asked the plaintiff as to what was the rent advance. Plaintiff told me that he had paid rent advance of Rs.1,00,000/-. He also told me that he had received the said rent advance and that he

had to vacate the house. Thereafter he took me to the house of the defendant in occupation of the plaintiff and immediately vacated the house. Then, at the instance of plaintiff, I got written a "Karar" through some one and attested it. Plaintiff handed over the key of the house to the defendant. Then I proceeded to market.

3. I say that I do not know to read or write English. The contents of Ex.P3 are not true. The contents were not read over and explained to me at the time I had signed the same.

**Further examination-in-chief by the Advocate for defendant:**

I have filed affidavit in lieu of chief examination and I have signed the said affidavit. The contents of the affidavit is true.

**Cross examination by the Advocates for Plaintiff:**

I know the defendant since 10 to 12 years. He was working in a ready made cloth shop in K.M.Pura. Some person had written Ex.P3. Some 2 or 3 other persons were also present there then. I do not know their names. I did not ask the plaintiff or the scribe of Ex.P3 to read and explain its contents to me. The key was handed over in my presence. I signed Ex.P3 in the house of defendant which was in occupation of plaintiff. I do not know the names of others who had signed Ex.P3 in my presence. In my presence, nothing was paid by the plaintiff to the defendant nor anything by the defendant to the plaintiff.

Re-examination: Nil

R.O.I & A.C.
Sd/-
Civil Judge

## DOCUMENTS

**Ex.P1**

Rent Advance Receipt

I, Mahadeva S/o Ramadeva being the owner of House No.5 of K.M.Pura had agreed to lease out the said premises to Rajanna S/o Venkanna on a monthly rent of Rs.10,000/-(Rupees ten thousand only)

Now I have received a sum of Rs.1,00,000/- towards rent advance/security deposit which shall not carry any interest, except in case of non-refund of the same immediately, in which case, it shall carry interest at 12% per annum.

Place: K.M.Pura
Date : 24.8.2001

Sd/-
Mahadeva

**Ex.P2**

Acknowledgement of debt

This the 25th day of March 2003, I Mahadeva S/o Ramadeva have repaid Rs.20,000/- (Rupees twenty thousand only) out of rent advance amount of Rs.1,00,000/- paid by Rajanna S/o Venkanna under Rent Advance receipt dated 24.08.2001. The balance of Rs.80,000/- (Rupees eighty thousand only) will be paid at Rs.10,000/- per month in eight installments. I hereby bind myself for the balance amount of Rs.80,000/-.

I have taken possession of House No.5, K.M.Pura and I have received the rent of the premises up to date.

Sd/-
Mahadeva

Witnesses:

1) Basappa
2) Narayanappa

**Ex.P3**

Deed of Agreement

This deed of agreement is executed on this the 2nd day of April 2003 between Sri Mahadeva S/o Ramadeva, aged 57 years, Megara Village, K.M.Pura hereinafter called as 1st party, which shall mean and include his legal representatives, executors and assignees on the one part and Sri Rajanna S/o Venkanna, aged 52 years, Megara Village, K.M.Pura hereinafter called as 2nd Party, which shall mean and include his heirs legal representatives, executors and assignees on the other part present as follows:-

Whereas the 1st party is the lawful owner and landlord of House No.5, K.M.Pura and 2nd party is the tenant in respect of the said premises, who had paid rent advance of Rs.1,00,000/- to the 1st party in respect of said premises. 1st party landlord has repaid a sum of Rs.20,000/- (Rupees twenty thousand only) by cash on 25.3.2003 to the 2nd party and agrees to pay the balance rent advance of Rs.80,000/- (Rupees eighty thousand only) in eight equal installments on 1st of every calendar month without fail. The 1st party further agrees to pay interest at 12% per annum in case of default of any one of the monthly installments.

In witness whereof 1st party and 2nd party have set their hands to the deed of agreement at K.M.Pura on this 2nd day of April 2003.

Sd/-
(Mahadeva)

Sd/-
(Rajanna)

Witnesses:

1) Narayanappa
2) Marappa

**Ex.P4**

Registered postal envelope containing the address of defendant which was returned to plaintiff's Advocate with an endorsement of "refused".

**Ex.P5**

Copy of the demand notice dated 5.1.2006 got sent by the Plaintiff to the defendant demanding the balance rent advance of Rs.80,000/- with interest at 12% per annum and Advocate's fee of Rs.1,000/-.

DOCUMENTS FOR DEFENDANT – Nil

*************

## ಕಾನೂನು ಪತ್ರಿಕೆ – II

1. ಈ ಕೆಳಕಂಡ ಪ್ರಕರಣದಲ್ಲಿ ವಿವಾದಾಂಶವನ್ನು ರೂಪಿಸಿರಿ: ಅಂಕಗಳು: 10

**ಮೂಲದಾವೆ ಸಂಖ್ಯೆ. 102/2013**

ವಾದಿಗಳು: 1) ಮಹೇಶ ಹೆಚ್.ಎಮ್.

2) ಸುಧೀರ್ ಹೆಚ್.ಎಮ್.

ವಿರುದ್ಧ

ಪ್ರತಿವಾದಿ: ನಾಗೇಶ ಹೆಚ್.ಎಮ್.

ದಿನಾಂಕ 12.06.2013 ರಂದು ಈ ದಾವೆಯನ್ನು ದಾಖಲಿಸಲಾಗಿದೆ

### ವಾದಪತ್ರ

1. ಪ್ರತಿವಾದಿಯು ಒಂದು ಮತ್ತು ಎರಡನೇ ವಾದಿಯರ ಹಿರಿಯ ಸಹೋದರ. ವಾದಿಯರ ತಂದೆ ಹೆಚ್.ಎಮ್.ಹನುಮಂತರಾಮಯ್ಯನವರು ವಾದಿಯರು ಮತ್ತು ಪ್ರತಿವಾದಿಯನ್ನು ಕಾನೂನು ಸಮ್ಮತ ವಾರಸುದಾರರನ್ನಾಗಿ ಬಿಟ್ಟು ದಿನಾಂಕ 28.10.1968 ರಂದು ಮೃತಪಟ್ಟಿರುತ್ತಾರೆ. ವಾದಿಯರು ಮತ್ತು ಪ್ರತಿವಾದಿಯ ತಾಯಿ ಶ್ರೀಮತಿ ಉಮಾವತಿಯವರು ದಿನಾಂಕ 30.3.1996 ರಂದು ಮೃತಪಟ್ಟಿರುತ್ತಾರೆ. ಹೆಚ್.ಎಮ್.ಹನುಮಂತರಾಮಯ್ಯನವರ ಮರಣಾನಂತರ ವಾದಿಯರು ಮತ್ತು ಪ್ರತಿವಾದಿ ಇಬ್ಬರೂ ಮೃತರ ಸ್ವತ್ತನ್ನು ಉತ್ತರವರ್ತಿ ಮಾಡಿಕೊಂಡಿರುತ್ತಾರೆ. ವಾದಿಯರು ಮತ್ತು ಪ್ರತಿವಾದಿ ಅವಿಭಕ್ತ ಕುಟುಂಬದಲ್ಲಿ ವಾಸವಿರುತ್ತಾರೆ ಮತ್ತು ದಾವಾ ಸ್ವತ್ತುಗಳು ಅವರ ಅವಿಭಕ್ತ ಕುಟುಂಬದ ಸ್ವತ್ತುಗಳಾಗಿದೆ. ಹಿಂದೆ ದಾವಾ ಐಟಂ ನಂ.1 ಮತ್ತು 2 ಸ್ವತ್ತುಗಳು ವಾದಿಯರ ಮತ್ತು ಪ್ರತಿವಾದಿಯ ತಂದೆಯ ಹೆಸರಿನಲ್ಲಿತ್ತು ಮತ್ತು ದಾವಾ ಐಟಂ 2 ಕೃಷಿ ಭೂಮಿಯಾಗಿದೆ, ಇವತ್ತಿಗೂ ವಾದಿಯರು ಮತ್ತು ಪ್ರತಿವಾದಿಯ ತಂದೆಯ ಹೆಸರಿನಲ್ಲಿಯೇ ಇದೆ. ದಾವಾ ಐಟಂ ನಂ.3 ಸ್ವತ್ತನ್ನು ದಿನಾಂಕ 23.10.1982ರಂದು 2ನೇ ವಾದಿಯ ಹೆಸರಿಗೆ ಅವನು ಅಪ್ರಾಪ್ತ ವಯಸ್ಕನಿದ್ದಾಗ ತಾಯಿ ಸಹಜ ಸಂರಕ್ಷಕರಾಗಿ ಖರೀದಿ ಮಾಡಲಾಗಿದೆ. ದಾವಾ ಐಟಂ ನಂ.4 ಸ್ವತ್ತನ್ನು ಮುನಿಸಿಪಾಲಿಟಿಯವರು ವಾದಿಯರ ತಾಯಿಯ ಹೆಸರಿಗೆ ಹಂಚಿಕೆ ಮಾಡಿರುತ್ತಾರೆ ಮತ್ತು ಆಕೆಗೆ ಅವರ ಸ್ವಾಧೀನವನ್ನು ವಹಿಸಿಕೊಟ್ಟಿರುತ್ತಾರೆ ಮತ್ತು ಆಕೆಯ ಮರಣಾನಂತರ, ಅವರು ಸದರಿ ಸ್ವತ್ತನ್ನು ಉತ್ತರವರ್ತಿ ಮಾಡಿಕೊಂಡಿರುತ್ತಾರೆ. ದಾವಾ ಐಟಂ ನಂ.6 ಮತ್ತು 7 ಸ್ವತ್ತುಗಳು, 1ನೇ ವಾದಿ ಮತ್ತು ಪ್ರತಿವಾದಿಯ ಹೆಸರಿನಲ್ಲಿದೆ. ದಾವಾ ಸ್ವತ್ತುಗಳಲ್ಲಿ ವಾದಿಯರು ಪ್ರತಿಯೊಬ್ಬರು 1/3ನೇ ಪಾಲಿಗೆ ಅರ್ಹರಾಗಿರುತ್ತಾರೆ. ಆದರೆ ದಾವಾ ಸ್ವತ್ತುಗಳನ್ನು ಪಾಲು ಮಾಡಿ ಅವರ ಪಾಲುಗಳನ್ನು ಹಂಚಿಕೆ

ಮಾಡಿಕೊಡಲು ವಾದಿಯರು ಮಾಡಿದ ವಿನಂತಿಗೆ ಪ್ರತಿವಾದಿ ಲಕ್ಷ್ಯ ಕೊಡಲಿಲ್ಲ. ಈಗ ಪ್ರತಿವಾದಿ ದಾವಾ ಸ್ವತ್ತುಗಳನ್ನು ಪರಭಾರೆ ಮಾಡಲು ಪ್ರಯತ್ನ ಪಡುತ್ತಿದ್ದಾನೆ ಆದ್ದರಿಂದ ಪಾಲಿಗಾಗಿ ಈ ದಾವೆ ಮಾಡಲಾಗಿದೆ.

2. ದಿನಾಂಕ 28.10.1968 ಮತ್ತು 30.03.1996 ರಂದು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ದಾವಾ ಕಾರಣ ಉಂಟಾಗಿರುತ್ತದೆ.

3. ಆದ್ದರಿಂದ ವಾದಿಯರು ಅವರ ಪರವಾಗಿ ಮತ್ತು ಪ್ರತಿವಾದಿಯ ವಿರುದ್ಧವಾಗಿ ತೀರ್ಪು ಮತ್ತು ಡಿಕ್ರಿಯನ್ನು ನೀಡಬೇಕೆಂದು ಘನ ನ್ಯಾಯಾಲಯದಲ್ಲಿ ಪಾರ್ಥಿಸುತ್ತಾರೆ:

ಎ) ದಾವಾ ತಪಶೀಲು ಸ್ವತ್ತುಗಳನ್ನು ಪಾಲು ಮಾಡಿಕೊಡಬೇಕು ಮತ್ತು ಪ್ರತಿ ವಾದಿಯರಿಗೂ ದಾವಾ ಸ್ವತ್ತುಗಳಲ್ಲಿ ತಲಾ 1/3ನೇ ಪಾಲನ್ನು ಹಂಚಿಕೆ ಮಾಡಿಕೊಡಬೇಕು.

ಬಿ) ದಾವಾದ ಖರ್ಚು ಮತ್ತು ದಾವಾದ ಸಂಗತಿ ಮತ್ತು ಸಂದರ್ಭಗನುಸಾರವಾಗಿ ನ್ಯಾಯಾಲಯ ನೀಡಬಹುದಾದ ಬೇರೆ ಯಾವುದೇ ಮತ್ತು ಇನ್ನೂ ಹೆಚ್ಚಿನ ಪರಿಹಾರಗಳು.

<u>ಪ್ರತಿವಾದಿಯ ಪ್ರತಿದಾವಾ ಪತ್ರ</u>

1. ದಾವೆ ಸುಳ್ಳು, ನಿಷ್ಪ್ರಯೋಜಕ ಮತ್ತು ಸಮರ್ಥನೀಯವಲ್ಲ

2. ವಾದಿಯರು ಮೇಲಿನ ದಾವೆಯಲ್ಲಿ ಕೇಳಿದ ಪರಿಹಾರಗಳನ್ನು ಪಡೆಯಲು ಅರ್ಹರಲ್ಲ. ಅವಿಭಕ್ತ ಕುಟುಂಬದ ಸ್ವತ್ತುಗಳಲ್ಲಿ ಮಾತ್ರ ವಾದಿಯರು ಹಕ್ಕು ಕೇಳಲು ಅರ್ಹರು. ಆದರೆ ಎಲ್ಲಾ ಸ್ವತ್ತುಗಳು ಅವಿಭಕ್ತ ಕುಟುಂಬದ ಸ್ವತ್ತುಗಳಲ್ಲ.

3. ಪ್ರತಿವಾದಿಯ ತಂದೆ ಮಾರುಕಟ್ಟೆಯಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದರು ಮತ್ತು ಅವರ ಮರಣಾನಂತರ, ಪ್ರತಿವಾದಿ ಸದರಿ ವ್ಯಾಪಾರವನ್ನು ಮುಂದುವರೆಸಿದ್ದನು ಮತ್ತು ಸದರಿ ವ್ಯಾಪಾರದಲ್ಲಿ ಅವನು ನಷ್ಟ ಅನುಭವಿಸಿರುತ್ತಾನೆ ಎಂದು ಹೇಳುತ್ತಾನೆ.

4. ಎರಡನೇ ವಾದಿ ವ್ಯಾಪಾರವನ್ನು ಮುಂದುವರೆಸಲು ತನಗೆ ಸಹಾಯ ಮಾಡಿಲ್ಲ ಎಂದು ಪ್ರತಿವಾದಿ ಹೇಳುತ್ತಾನೆ. ಎರಡನೇ ವಾದಿ ದಾವಾ ಐಟಂ ನಂ.1 ಸ್ವತ್ತಿನಲ್ಲಿ ವಾಸವಿದ್ದಾನೆ.

5. ವಾದಿಯರು ಈ ಮೇಲಿನ ದಾವೆಯಲ್ಲಿ ಎರಡು ಐಟಂ ಆಸ್ತಿಗಳನ್ನು ಸೇರಿಸಿಲ್ಲ, ಅವುಗಳು ಯಾವುದೆಂದರೆ ಮಾರೇನಹಳ್ಳಿ ಗ್ರಾಮದಲ್ಲಿ ಇರುವ ಸರ್ವೆ ನಂ.43ರಲ್ಲಿ 60 x 40 ಅಡಿ ವಿಸ್ತೀರ್ಣದ ಸೈಟ್ ನಂ.9 ಮತ್ತು ಮಾರೇನಹಳ್ಳಿ ಗ್ರಾಮದಲ್ಲಿರುವ ನಂ.336/18ರ ಮನೆ ಸ್ವತ್ತು.

6. ಪ್ರತಿವಾದಿಯ ತಾಯಿ ಶ್ರೀಮತಿ ಉಮಾವತಿ ಜೀವಂತ ಇದ್ದಾಗ ಅಂದರೆ 16.3.1990ರಂದು ನೊಂದಾಯಿತ ಪಾಲು ಪತ್ರದ ಮೂಲಕ ಕುಟುಂಬದಲ್ಲಿ ಪಾಲು ಮಾಡಲಾಗಿತ್ತು ಮತ್ತು ಎಲ್ಲಾ

ಕುಟುಂಬದ ಸದಸ್ಯರಿಗೆ ಸ್ವತ್ತುಗಳನ್ನು ಹಂಚಿಕೆ ಮಾಡಲಾಗಿತ್ತು ಮತ್ತು ಇನ್ನೊಂದು ಬಾರಿ ಕುಟುಂಬದ ಸ್ವತ್ತುಗಳನ್ನು ಪಾಲು ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಆದ್ದರಿಂದ ದಾವೆಯನ್ನು ವಜಾ ಮಾಡಬೇಕೆಂದು ಪ್ರತಿವಾದಿ ಪ್ರಾರ್ಥಿಸುತ್ತಾನೆ.

**2. ಈ ಕೆಳಕಂಡ ಪ್ರಕರಣದಲ್ಲಿ ವಿವಾದಾಂಶವನ್ನು ರೂಪಿಸಿರಿ:** **ಅಂಕಗಳು: 10**

**ಮೂಲದಾವೆ ಸಂಖ್ಯೆ.10/2013**

**ವಾದಿ:** ಶಾರದ

**ವಿರುದ್ಧ**

**ಪ್ರತಿವಾದಿ:** ನಾರಾಯಣ

ದಿನಾಂಕ 14.04.2013 ರಂದು ಈ ದಾವೆಯನ್ನು ದಾಖಲಿಸಲಾಗಿದೆ

**ವಾದಪತ್ರ**

1. ವಾದಿಯು ಕೆ.ಎಂ.ಪುರ ತಾಲೂಕಿನ ಮೇಗಾರ ಗ್ರಾಮದಲ್ಲಿರುವ ಸರ್ವೆ ನಂ.130ರಲ್ಲಿ 1 ಎಕರೆ 3 ಗುಂಟೆ ಜಮೀನನ್ನು ದಿನಾಂಕ 6.8.1980ರ ಕ್ರಯ ಪತ್ರದ ಮೂಲಕ ರಾಚಯ್ಯರವರಿಂದ ಖರೀದಿ ಮಾಡಿರುತ್ತಾಳೆ. ಕ್ರಯದ ನಂತರ ಸರ್ವೆ ನಂ.130ರ ಖಾತೆಯು ವಾದಿಯ ಹೆಸರಿಗೆ ಬದಲಾವಣೆಯಾಗಿದೆ ಮತ್ತು ಆಕೆಯು ಸದರಿ ಸರ್ವೆ ನಂಬರಿನ ಸ್ವತ್ತುಗಳಲ್ಲಿ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದಳು. ಸರ್ವೆ ನಂ.130ರಲ್ಲಿ 1 ಎಕರೆ 3 ಗುಂಟೆ ಜಮೀನಿನ ಪೈಕಿ 21 ಗುಂಟೆ ಜಮೀನನ್ನು ದಿನಾಂಕ 9.10.1995ರ ಕ್ರಯ ಪತ್ರದ ಮೂಲಕ ಕಾವೇರಪ್ಪನಿಗೂ, 10 ಗುಂಟೆ ಜಮೀನನ್ನು ದಿನಾಂಕ 16.8.1996ರ ಕ್ರಯ ಪತ್ರದ ಮೂಲಕ ಜಗನ್ನಾಥ ಎಂಬುವವರಿಗೂ ಮತ್ತು 5 ಗುಂಟೆ ಜಮೀನನ್ನು ದಿನಾಂಕ 16.8.1996ರ ಕ್ರಯ ಪತ್ರದ ಮೂಲಕ ಸಿ.ರಾಮು ಎಂಬುವವರಿಗೂ ವಾದಿಯು ಮಾರಾಟ ಮಾಡಿರುತ್ತಾಳೆ ಮತ್ತು ತಪಶೀಲಿನಲ್ಲಿ ವಿವರಿಸಿದಂತೆ ಸರ್ವೆ ನಂ.130ರಲ್ಲಿ 7 ಗುಂಟೆಯನ್ನು ತನ್ನಲ್ಲಿ ಇಟ್ಟುಕೊಂಡಿರುತ್ತಾಳೆ.
2. ದಾವಾ ತಪಶೀಲು ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಸರ್ವೆ ನಂ.129ರಲ್ಲಿ ತಾನು ಸ್ವತ್ತನ್ನು ಹೊಂದಿರುವುದಾಗಿ ಪ್ರತಿವಾದಿ ಹೇಳಿಕೊಂಡಿದ್ದಾನೆ. ಪ್ರತಿವಾದಿ ದಾವಾ ಸ್ವತ್ತನ್ನು ಒತ್ತುವರಿ ಮಾಡಲು ಪ್ರಯತ್ನ ಪಡುತ್ತಿದ್ದಾನೆ ಮತ್ತು ದಿನಾಂಕ 2.4.2013ರಂದು ಪ್ರತಿವಾದಿ ತನ್ನ ಬೆಂಬಲಿಗರ ಜೊತೆಗೆ ಬಂದು ವಾದಿಯ ದಾವಾ ತಪಶೀಲು ಸ್ವತ್ತಿನಲ್ಲಿರುವ ಸ್ವಾಮ್ಯವನ್ನು ನಿರಾಕರಿಸಿ ಅಕ್ರಮ ಸ್ವಾಧೀನ ಪಡೆಯಲು ಪ್ರಯತ್ನಿಸಿರುತ್ತಾನೆ. ಆದ್ದರಿಂದ ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾಳೆ.

3. ದಿನಾಂಕ 2.4.2013ರಂದು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ದಾವಾ ಕಾರಣ ಉಂಟಾಗಿರುತ್ತದೆ.
4. ಆದ್ದರಿಂದ ವಾದಿ ಅವಳ ಪರವಾಗಿ ಮತ್ತು ಪ್ರತಿವಾದಿಯ ವಿರುದ್ಧವಾಗಿ ತೀರ್ಪು ಮತ್ತು ಡಿಕ್ರಿಯನ್ನು ನೀಡಬೇಕೆಂದು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸುತ್ತಾಳೆ.

ಎ) ವಾದಿಯು ದಾವಾ ಸ್ವತ್ತಿನ ಪೂರ್ಣ ಮಾಲೀಕಳಾಗಿ ಸ್ವಾಧೀನ ಮತ್ತು ಅನುಭೋಗದಲ್ಲಿ ಇದ್ದಾಳೆಂದು ಘೋಷಣೆ ಮಾಡಬೇಕು.

ಬಿ) ದಾವಾ ಸ್ವತ್ತಿನ ವಾದಿಯ ಶಾಂತಿಯುತ ಸ್ವಾಧೀನಕ್ಕೆ ಮತ್ತು ಅನುಭೋಗಕ್ಕೆ ಅಡ್ಡಿ ಆತಂಕ ಪಡಿಸಬಾರದೆಂದು ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯನ್ನು ನೀಡಬೇಕು.

ಸಿ) ದಾವಾದ ಖರ್ಚು ಮತ್ತು ದಾವಾದ ಸಂಗತಿ ಮತ್ತು ಸಂದರ್ಭಗನುಸಾರವಾಗಿ ನ್ಯಾಯಾಲಯ ನೀಡಬಹುದಾದ ಬೇರೆ ಯಾವುದೇ ಮತ್ತು ಇನ್ನೂ ಹೆಚ್ಚಿನ ಪರಿಹಾರಗಳು.

<u>ಪ್ರತಿವಾದಿಯರ ಪ್ರತಿದಾವಾ ಪತ್ರ</u>

1. ವಾದಿ ಸಲ್ಲಿಸಿದ ದಾವೆಯು ಸುಳ್ಳು ಮತ್ತು ಸಮರ್ಥನೀಯವಲ್ಲ.
2. ಕೆ.ಎಂ.ಪುರ ತಾಲೂಕಿನ ಮೇಗಾರ ಗ್ರಾಮದ ಸರ್ವೆ ನಂ.130, 142, 160/5 ಪೋಡಿ ಆಗಿಲ್ಲ ಎಂದು ಪ್ರತಿವಾದಿ ಭಿನ್ನವಿಸುತ್ತಾನೆ. ಮೇಗಾರ ಗ್ರಾಮದ ಸರ್ವೆ ನಂ.130 ಸ್ವತ್ತನ್ನು ವಾದಿಯು 6.8.1980ರ ಕ್ರಯ ಪತ್ರದ ಅಡಿಯಲ್ಲಿ ರಾಚಯ್ಯ ಎನ್ನುವವರಿಂದ ಖರೀದಿ ಮಾಡಿರುತ್ತಾಳೆ ಮತ್ತು ಎಲ್ಲಾ ಸ್ವತ್ತುಗಳು ಪೂರ್ವಕ್ಕೆ ಚೌಡಪ್ಪನ ಜಮೀನು, ಪಶ್ಚಿಮಕ್ಕೆ ಕಾಲುವೆ ಮತ್ತು ಮೇಗಾರ ಗ್ರಾಮದ ಗಡಿ, ದಕ್ಷಿಣಕ್ಕೆ ನೀರಿನ ಕಾಲುವೆ ಮತ್ತು ಸರ್ವೆ ನಂ.131ರ ಜಮೀನು ಮತ್ತು ಉತ್ತರಕ್ಕೆ ಮೇಗಾರ ಕೆರೆ ಏರಿಯ ಗಡಿಯೊಳಗೆ ಇರುತ್ತದೆ.
3. ವಾದಿಯು ದಿನಾಂಕ 9.10.1995ರ ಕ್ರಯ ಪತ್ರದ ಅಡಿಯಲ್ಲಿ ಪೂರ್ವಕ್ಕೆ ವಾದಿಯು ಉಳಿಸಿದ ಜಮೀನು, ಪಶ್ಚಿಮಕ್ಕೆ ಚಂದ್ರಶೇಖರನಿಗೆ ಸರ್ವೆ ನಂ.129ರಲ್ಲಿ ಮಾರಾಟ ಮಾಡಿದ ಜಮೀನು, ದಕ್ಷಿಣಕ್ಕೆ ಪಾರ್ವತಿಯ ಜಮೀನು, ಉತ್ತರಕ್ಕೆ ಮೇಗಾರ ಕೆರೆ ಏರಿ ಒಳಗಿರುವ ಭಾಗಶಃ ಜಮೀನನ್ನು ಕಾವೇರಪ್ಪನಿಗೆ ಮಾರಾಟ ಮಾಡಿರುತ್ತಾಳೆ. ಸದರಿ ಕಾವೇರಪ್ಪನು ದಿನಾಂಕ 15.6.1997ರ ಕ್ರಯ ಪತ್ರದ ಅಡಿಯಲ್ಲಿ ಸ್ವತ್ತನ್ನು ಎಂ.ಮಂಜೇಶ್ ಎನ್ನುವವರಿಗೆ ಮಾರಾಟ ಮಾಡಿರುತ್ತಾನೆ.
4. ಪ್ರತಿವಾದಿಯು ಎಂ.ಮಂಜೇಶನ ಜಿ.ಪಿ.ಎ. ಹೊಂದಿದವನಾಗಿದ್ದು ಎಂ.ಮಂಜೇಶ ಖರೀದಿ ಮಾಡಿದ ಆಸ್ತಿಯ ಸ್ವಾಧೀನ ಮತ್ತು ಅನುಭೋಗದಲ್ಲಿದ್ದಾನೆ ಮತ್ತು ವಾದಿಯು ಸರ್ವೆ ನಂ.130ರಲ್ಲಾಗಲಿ

ಅಥವಾ ಇನ್ನಾವುದೇ ಸರ್ವೆ ನಂಬರಿನಲ್ಲಾಗಲಿ ಯಾವುದೇ ಆಸ್ತಿಯನ್ನು ಇಟ್ಟುಕೊಂಡಿರುವುದಿಲ್ಲ. ದಾವಾ ತಪಶೀಲಿನಲ್ಲಿ ಹೇಳಿದ ಆಸ್ತಿಯು ಕಾಲ್ಪನಿಕ ಆಸ್ತಿಯಾಗಿದೆ.

5. ದಾವಾ ಮೌಲ್ಯವು ಸರಿಯಿಲ್ಲ ಮತ್ತು ನ್ಯಾಯಾಲಯ ಶುಲ್ಕ ಪಾವತಿಸಿದ್ದು ಕೊರತೆಯಾಗಿದೆ, ಆದ್ದರಿಂದ ದಾವೆಯನ್ನು ವಜಾ ಮಾಡಬೇಕೆಂದು ಪ್ರತಿವಾದಿ ಪ್ರಾರ್ಥಿಸುತ್ತಾನೆ.

**3. ಮೌಖಿಕ ಹಾಗೂ ದಾಖಲಾತಿ ಸಾಕ್ಷಗಳ ಆಧಾರದ ಮೇಲೆ ಸಮಂಜಸ ಹಾಗೂ ತರ್ಕಬದ್ಧ ಸಮರ್ಥನಾಂಶಗಳನ್ನು ನೀಡಿ ತೀರ್ಪನ್ನು ಬರೆಯಿರಿ:**

**ಅಂಕಗಳು: 80**

ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕೆ.ಎಂ.ಪುರ
ಮೂಲದಾವೆ ಸಂಖ್ಯೆ 25/2006

ರಾಜಣ್ಣ ತಂದೆ ವೆಂಕಣ್ಣ
ವಯಸ್ಸು 55 ವರ್ಷಗಳು,
ಮೇಗಾರ ಹಳ್ಳಿ,
ಕೆ.ಎಂ.ಪುರ. ವಾದಿ

ಮತ್ತು

ಮಹದೇವ ತಂದೆ ರಾಮದೇವ
ವಯಸ್ಸು 60 ವರ್ಷಗಳು,
ಮೇಗಾರ ಹಳ್ಳಿ,
ಕೆ.ಎಂ.ಪುರ. ಪ್ರತಿವಾದಿ

ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 26, ಕ್ರಮಾದೇಶ 7 ನಿಯಮ 1ರಡಿಯಲ್ಲಿ ದಾವಾಪತ್ರ

ವಾದಿ ನಿವೇದಿಸುವುದೇನೆಂದರೆ:

1. ಸಮನ್ಸ್, ನೋಟೀಸು ನೀಡುವ ಉದ್ದೇಶದಿಂದ ಪಕ್ಷಕಾರರ ವಿಳಾಸವನ್ನು ಮೇಲೆ ಹೇಳಿದ ವ್ಯಾಜ್ಯ ಶೀರ್ಷಿಕೆಯಲ್ಲಿ ಹೇಳಲಾಗಿದೆ.

2. ವಾದಿಯು ಕೆ.ಎಂ.ಪುರದ ನಂ.5ನೇ ವಾಸ್ತವ್ಯದ ಮನೆಯಲ್ಲಿ ಪ್ರತಿವಾದಿಯ ಬಾಡಿಗೆದಾರನಾಗಿ ಸ್ವಾಧೀನದಲ್ಲಿದ್ದನು.

3. ದಿನಾಂಕ 25.3.2003ರಂದು ವಾದಿಯು ಸದರಿ ಮನೆಯ ಖಾಲಿ ಸ್ವಾಧೀನವನ್ನು ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾನೆ. ದಿನಾಂಕ 24.8.2001ರಂದು ಬಾಡಿಗೆ ಮುಂಗಡ ರಶೀದಿಯಡಿಯಲ್ಲಿ ಪ್ರತಿವಾದಿ ಸ್ವೀಕರಿಸಿದ ರೂಪಾಯಿ 1,00,000/- ಪೈಕಿ ರೂಪಾಯಿ 20,000/- ಗಳನ್ನು ವಾದಿಯು ಸ್ವಾಧೀನವನ್ನು ಬಿಟ್ಟುಕೊಡುವಾಗ ಪ್ರತಿವಾದಿಯು ವಾದಿಗೆ ಮರುಪಾವತಿ ಮಾಡಿರುತ್ತಾನೆ. ದಿನಾಂಕ 25.3.2003ರಂದು ತಿಂಗಳಿಗೆ ರೂಪಾಯಿ 10,000/- ದಂತೆ ಒಟ್ಟು 8 ಕಂತುಗಳಲ್ಲಿ ಉಳಿಕೆ ರೂಪಾಯಿ 80,000/- ಗಳನ್ನು ಪಾವತಿ ಮಾಡುವುದಾಗಿ

ಪ್ರತಿವಾದಿ ಒಪ್ಪಿಕೊಂಡಿರುತ್ತಾನೆ ಮತ್ತು ಕ್ರಮವಾದ ಕಂತುಗಳಲ್ಲಿ ಹಣವನ್ನು ಕೊಡಲು ವಿಫಲನಾದಲ್ಲಿ ವಾರ್ಷಿಕ ಶೇಕಡ 12 ದರದಂತೆ ಬಡ್ಡಿ ಕೊಡುವುದಾಗಿ ಒಪ್ಪಿಕೊಂಡಿರುತ್ತಾನೆ. ಈ ಬಗ್ಗೆ ಪ್ರತಿವಾದಿ ದಿನಾಂಕ 25.3.2003ರಂದು ಋಣದ ಒಪ್ಪಿಗೆ ಬರೆದುಕೊಟ್ಟಿರುತ್ತಾನೆ ಮತ್ತು ದಿನಾಂಕ 2.4.2003ರಂದು ಒಂದು ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾನೆ.

4. ನಂತರ ಪುನರಾವರ್ತಿತ ಕೋರಿಕೆ, ತಗಾದೆ ಮತ್ತು ರಿಜಿಸ್ಟರ್ಡ್ ನೋಟೀಸು ತರುವಾಯ ಪ್ರತಿವಾದಿ ಹಣವನ್ನು ನೀಡಲು ವಿಫಲನಾಗಿರುತ್ತಾನೆ ಮತ್ತು ನಿರ್ಲಕ್ಷಿಸಿರುತ್ತಾನೆ. ಆದ್ದರಿಂದ ಈ ದಾವೆ.

5. ಈಗ ವಾದಿಗೆ ಪ್ರತಿವಾದಿ ಕೊಡಬೇಕಾಗಿದ್ದು ಈ ಕೆಳಕಂಡಂತೆ ಇದೆ:

| | |
|---|---|
| (ಎ) ಬಾಡಿಗೆ ಮುಂಗಡ ಬಾಕಿ | ರೂ. 80,000/- |
| (ಬಿ) ಬಡ್ಡಿ ವಾರ್ಷಿಕ ಶೇಕಡ 12 | ರೂ. 28,800/- |
| ಒಟ್ಟು | ರೂ. 1,08,800/- |

6. ಋಣದ ಒಪ್ಪಿಗೆ ಮತ್ತು ಕರಾರು ಪತ್ರದ ದಿನಾಂಕದಂದು ಮತ್ತು ನಂತರ ಈ ಘನ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ದಾವಾ ಕಾರಣ ಉಂಟಾಗಿರುತ್ತದೆ. ದಾವೆಯು ಕಾಲಮಿತಿಯಲ್ಲಿದೆ.

7. ದಾವೆಯನ್ನು ರೂ.1,08,800/- ಎಂದು ಮೌಲ್ಯ ಮಾಡಲಾಗಿದೆ ಮತ್ತು ಕೋರ್ಟ್ ಫೀ ರೂ.7,241/- ನ್ನು ದಾವಾ ಪತ್ರಕ್ಕೆ ಪಾವತಿಸಲಾಗಿದೆ.

ಆದ್ದರಿಂದ ರೂ.1,08,800/-ಕ್ಕೆ ಕೋರ್ಟ್ ಖರ್ಚು ಮತ್ತು ಚಾಲ್ತಿ ಮತ್ತು ಭವಿಷ್ಯದ ವಾರ್ಷಿಕ ಬಡ್ಡಿ ಶೇಕಡ 12 ಸೇರಿಸಿ ಪ್ರತಿವಾದಿಯ ವಿರುದ್ಧ ತೀರ್ಪು ಮತ್ತು ಡಿಕ್ರಿಯನ್ನು ಮಾಡಬೇಕು ಮತ್ತು ದಾವಾದ ಸಂಗತಿ ಮತ್ತು ಸಂದರ್ಭಗನುಸಾರವಾಗಿ ನ್ಯಾಯಾಲಯ ನೀಡಬಹುದಾದ ಬೇರೆ ಯಾವುದೇ ಮತ್ತು ಇನ್ನೂ ಹೆಚ್ಚಿನ ಪರಿಹಾರಗಳನ್ನು ನ್ಯಾಯದೃಷ್ಟಿಯಿಂದ ಮತ್ತು ನ್ಯಾಯನೀತಿಯಿಂದ ಮಂಜೂರು ಮಾಡಲು ವಾದಿ ಪ್ರಾರ್ಥಿಸಿರುತ್ತಾನೆ.

ಸಹಿ/-
ವಾದಿ ಪರ ವಕೀಲರು
ದಿನಾಂಕ:24.03.2006

ಸಹಿ/-
ವಾದಿ

## ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 8 ನಿಯಮ 1ರಲ್ಲಿ ಪ್ರತಿವಾದಿ ಪರವಾಗಿ ಸಲ್ಲಿಸಿದ ಪ್ರತಿದಾವಾ ಪತ್ರ

ಪ್ರತಿವಾದಿ ನಿವೇದಿಸುವುದು ಈ ಕೆಳಕಂಡಂತೆ:

1. ವಾದಿಯು ಪ್ರಶ್ನಿತ ಮನೆಯನ್ನು ಖಾಲಿ ಮಾಡಿ ಸ್ವಾಧೀನವನ್ನು ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದು ನಿಜವಿದೆ. ಆದರೆ ಉಳಿದ ಆರೋಪಗಳು ಸುಳ್ಳು. ಪ್ರತಿವಾದಿಯು ಮುಂಗಡ ರೂ.1,00,000/–ವನ್ನು ವಾದಿಗೆ ಮರುಪಾವತಿ ಮಾಡಿದ್ದಾನೆ. ಆದ್ದರಿಂದ ವಾದಿಗೆ ಯಾವುದೇ ಹಣ ಕೊಡಲು ಬಾಕಿಯಿಲ್ಲ.

2. ಪ್ರತಿವಾದಿ ದಾವಾ ಪತ್ರದಲ್ಲಿ ಆಪಾದಿಸಿದಂತೆ ಯಾವತ್ತೂ ವಾದಿಗೆ ಹಣ ಕೊಡುವುದಾಗಿ ಒಪ್ಪಿಲ್ಲ ಮತ್ತು ಯಾವುದೇ ಬಡ್ಡಿ ಹಣ ಕೊಡಲು ಒಪ್ಪಿಲ್ಲ.

3. ಮನೆಯನ್ನು ಬಿಟ್ಟುಕೊಟ್ಟ ಬಗ್ಗೆ ರಶೀದಿ ಕೊಡಲು ವಾದಿ ಪ್ರತಿವಾದಿಯನ್ನು ಕೋರಿಕೊಂಡಿದ್ದನು. ಆ ಪ್ರಕಾರವಾಗಿ ಪ್ರತಿವಾದಿ ಒಪ್ಪಿಕೊಂಡಿದ್ದನು ಮತ್ತು ಇಂಗ್ಲೀಷ್‌ನಲ್ಲಿ ಸಹಿ ಮಾಡಿದ್ದನು. ಪ್ರತಿವಾದಿಗೆ ಇಂಗ್ಲೀಷ್ ಭಾಷೆ ಓದಲು ಮತ್ತು ಬರೆಯಲು ಗೊತ್ತಿಲ್ಲ. ವಾದಿ ಪ್ರತಿವಾದಿಯ ಸಹಿಗಳನ್ನು ಮೋಸದಿಂದ ಮತ್ತು ಸುಳ್ಳು ನಿರೂಪಣೆಯಿಂದ ಪಡೆದುಕೊಂಡಿರುತ್ತಾನೆ. ಆದ್ದರಿಂದ ದಾವಾ ಪತ್ರದಲ್ಲಿ ಹೇಳಿದ ದಾಖಲಾತಿಗಳು ಪ್ರತಿವಾದಿಗೆ ಬಂಧನಕಾರಿಯಲ್ಲ. ವಾದಿಯು ಪ್ರತಿವಾದಿಯ ಮುಗ್ಧತೆ ಮತ್ತು ಅಜ್ಞಾನವನ್ನು ದುರುಪಯೋಗಪಡಿಸಿಕೊಂಡಿದ್ದಾನೆ.

4. ದಾವೆಗೆ ದಾವಾ ಕಾರಣ ಇಲ್ಲ. ದಾವೆಯು ಕಾಲಮಿತಿಯಲ್ಲಿಲ್ಲ ಮತ್ತು ಅದು ಕಾಲಪರಿಮಿತಿಯಿಂದ ಪ್ರತಿಷೇಧಿತವಾಗಿದೆ.

5. ಇಲ್ಲಿ ನಿರಾಕರಿಸದೇ ಇದ್ದ ವಾದಪತ್ರದ ಇತರ ಎಲ್ಲಾ ಆಪಾದನೆಗಳು ಸುಳ್ಳು ಮತ್ತು ನಿರಾಕರಿಸಲಾಗಿದೆ.

6. ಪ್ರತಿವಾದಿ ವಾದಿಗೆ ಯಾವುದೇ ಹಣ ಕೊಡಲು ಹೊಣೆಗಾರನಲ್ಲ. ಈ ರೀತಿಯಾಗಿ ಮಾಡಿದ ದಾವೆ ಸಮರ್ಥನೀಯವಲ್ಲ.

7. ವಾದಿಗೆ ಸುಳ್ಳು ಎಂದು ಗೊತ್ತಿದ್ದು ದಾವೆ ದಾಖಲಿಸಿದ್ದರಿಂದ ಪ್ರತಿವಾದಿಗೆ ಹೆಚ್ಚಿನ ಹಾನಿ ಪರಿಹಾರ ಖರ್ಚನ್ನು ಮಂಜೂರು ಮಾಡಬೇಕು.

ಆದ್ದರಿಂದ ನ್ಯಾಯದಾನದ ದೃಷ್ಟಿಯಿಂದ ವಾದಿಯ ದಾವೆಯನ್ನು ಹೆಚ್ಚಿನ ಹಾನಿ ಪರಿಹಾರ ಖರ್ಚಿನ ಸಮೇತ ಆದೇಶ ಮಾಡಿ ವಜಾ ಮಾಡಬೇಕೆಂದು ಪ್ರತಿವಾದಿಯು ಗೌರವಾನ್ವಿತ ನ್ಯಾಯಾಲಯದಲ್ಲಿ ಪ್ರಾರ್ಥಿಸುತ್ತಾನೆ.

| | | |
|---|---|---|
| ದಿನಾಂಕ:29.05.2006 | ಸಹಿ/–<br>ಪ್ರತಿವಾದಿ ಪರ ವಕೀಲರು | ಸಹಿ/–<br>ಪ್ರತಿವಾದಿ |

ಮೇಲೆ ಹೇಳಿದ ಹೇಳಿಕೆಗಳು ನನ್ನ ತಿಳುವಳಿಕೆ, ಮಾಹಿತಿ ಮತ್ತು ನಂಬಿಕೆ ಮೇರೆಗೆ ಸತ್ಯವಾಗಿದೆ ಎಂದು ಪ್ರತಿವಾದಿಯಾದ ನಾನು ಘೋಷಿಸುತ್ತೇನೆ.

ಕೆ.ಎಂ.ಪುರ
ದಿನಾಂಕ: 29.5.2006

ಸಹಿ/-
ಪ್ರತಿವಾದಿ

ವಿವಾದಾಂಶಗಳು

1. ವಾದಿಗೆ ಪೂರ್ತಿ ಮುಂಗಡ ಹಣ ರೂ.1,00,000/-ವನ್ನು ಮರುಪಾವತಿ ಮಾಡಿದ್ದಾನೆ ಎಂದು ಪ್ರತಿವಾದಿಯು ರುಜುವಾತು ಪಡಿಸುತ್ತಾನೆಯೇ?
2. ಪ್ರತಿವಾದಿಯು ವಾದಿಗೆ ರೂ.80,000/- ಮತ್ತು ಅದಕ್ಕೆ ವಾರ್ಷಿಕ ಬಡ್ಡಿ ಶೇಕಡ 12 ಕೊಡಲು ಒಪ್ಪಿದ್ದಾನೆ ಎಂದು ವಾದಿ ರುಜುವಾತು ಪಡಿಸುತ್ತಾನೆಯೇ?
3. ವಾದಿಯು 25.3.2003 ದಿನಾಂಕದ ಋಣದ ಒಪ್ಪಿಗೆಗೆ ಮತ್ತು 2.4.2003 ದಿನಾಂಕದ ಕರಾರು ಪತ್ರಕ್ಕೆ ತನ್ನ ಸಹಿಗಳನ್ನು ತಪ್ಪು ನಿರೂಪಣೆ ಮತ್ತು ಮೋಸದಿಂದ ಪಡೆದುಕೊಂಡಿದ್ದಾನೆ ಎಂದು ಪ್ರತಿವಾದಿಯು ರುಜುವಾತುಪಡಿಸುತ್ತಾನೆಯೇ?
4. ದಾವೆಯು ಕಾಲಪರಿಮಿತಿಯಿಂದ ಪ್ರತಿಷೇಧಿತವಾಗಿದೆಯೇ?
5. ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ವಾದಿ ಅರ್ಹನೇ?
6. ಯಾವ ಆದೇಶ ಮತ್ತು ಡಿಕ್ರಿ?

ಸಾಕ್ಷ್ಯ

ಪಿ.ಡಬ್ಲ್ಯೂ.1

ಮುಖ್ಯ ವಿಚಾರಣೆಯ ಬದಲಿಗೆ ವಾದಿ ಸಲ್ಲಿಸಿದ ಪ್ರಮಾಣ ಪತ್ರ

ಕೆ.ಎಂ.ಪುರ, ಮೇಗಾರ ಗ್ರಾಮದ 55 ವರ್ಷದ ವಯಸ್ಸಿನ ವೆಂಕಣ್ಣನ ಮಗನಾದ ರಾಜಣ್ಣನಾದ ನಾನು ದೃಢೀಕರಿಸಿ ಪ್ರಮಾಣ ಮಾಡಿ ಈ ಕೆಳಕಂಡಂತೆ ಹೇಳುತ್ತೇನೆ.

1. ನಾನು ಈ ಮೇಲಿನ ದಾವೆಯಲ್ಲಿ ವಾದಿ ಇದ್ದೇನೆ ಎಂದು ಹೇಳುತ್ತೇನೆ. ನಾನು ಸಲ್ಲಿಸಿದ ದಾವಾಪತ್ರದಲ್ಲಿ ಹೇಳಿದ ವಿಷಯಗಳನ್ನು ಈ ಪ್ರಮಾಣ ಪತ್ರದ ಭಾಗ ಎಂದು ಓದಿಕೊಳ್ಳಬಹುದು ಎಂದು ಹೇಳುತ್ತಿದ್ದೇನೆ.

2. ನನಗೆ ಪ್ರತಿವಾದಿ ಗೊತ್ತಿದೆ, ನಾನು ಅವನ ವಾಸ್ತವ್ಯದ ಮನೆಯಲ್ಲಿ ವಾಸ ಇದ್ದೆನು ಮತ್ತು 2003ನೇ ಸಾಲಿನಲ್ಲಿ ಆ ಮನೆಯನ್ನು ಬಿಟ್ಟುಕೊಟ್ಟಿರುತ್ತೇನೆ ಎಂದು ಹೇಳುತ್ತಿದ್ದೇನೆ. ನಾನು ಮನೆಯನ್ನು ಪ್ರತಿವಾದಿಗೆ ಬಿಟ್ಟುಕೊಟ್ಟ ದಿನಾಂಕದಂದು ಅವನು ರೂ.20,000/- ಮಾತ್ರ ಮರುಪಾವತಿ ಮಾಡಿದ್ದಾನೆ ಎಂದು ಹೇಳುತ್ತಿದ್ದೇನೆ. ಪ್ರತಿವಾದಿ ಇನ್ನೂ ರೂ.80,000/-ವನ್ನು ನನಗೆ ಕೊಡಲು ಬಾಕಿ ಇದೆ ಮತ್ತು ಈ ಸಂಬಂಧ

ಪ್ರತಿವಾದಿ ಋಣ ಒಪ್ಪಿಗೆಯನ್ನು ಬರೆದು ಕೊಟ್ಟಿರುತ್ತಾನೆ ಎಂದು ಹೇಳುತ್ತಿದ್ದೇನೆ. ಪ್ರತಿವಾದಿ ಪ್ರತಿ ತಿಂಗಳು ರೂ.10,000/- ಕಂತಿನಲ್ಲಿ ಹಣ ಕೊಡುವುದಾಗಿ ಒಪ್ಪಿಕೊಂಡಿದ್ದರೂ ಯಾವುದೇ ಕಂತಿನ ಹಣವನ್ನು ಕೊಟ್ಟಿಲ್ಲ ಎಂದು ಹೇಳುತ್ತಿದ್ದೇನೆ.

3. ದಿನಾಂಕ 2.4.2003ರಂದು ಪ್ರತಿವಾದಿ ಕರಾರು ಪತ್ರವನ್ನು ಬರೆದು ಕೊಟ್ಟಿದ್ದಾನೆ ಎಂದು ಹೇಳುತ್ತಿದ್ದೇನೆ. ಹಣವನ್ನು ಕೊಡಲು ವಿಫಲನಾದಲ್ಲಿ ವಾರ್ಷಿಕ ಶೇಕಡ 12 ರಂತೆ ಬಡ್ಡಿ ಕೊಡುವುದಾಗಿ ಪ್ರತಿವಾದಿ ಒಪ್ಪಿಕೊಂಡಿರುತ್ತಾನೆ ಎಂದು ಹೇಳುತ್ತಿದ್ದೇನೆ.

ಗುರುತಿಸಿದವರು:
ಸಹಿ/-
(ವಕೀಲರು)

ಸಹಿ/-
ಹೇಳಿಕೆ ಕೊಡುವವನು

<u>ಮುಂದುವರಿದ ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದ</u>

ನಾನು ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಮತ್ತು ನಾನು ಪ್ರಮಾಣ ಪತ್ರಕ್ಕೆ ಸಹಿ ಮಾಡಿರುತ್ತೇನೆ. ಪ್ರಮಾಣ ಪತ್ರದಲ್ಲಿ ಹೇಳಿದ ವಿಷಯಗಳು ನಿಜವಿದೆ. ನಾನು ಬಾಡಿಗೆ ಮುಂಗಡ ರಶೀದಿಯನ್ನು ಹಾಜರು ಪಡಿಸಿದ್ದೇನೆ ಅದನ್ನು ನಿಶಾನೆ ಪಿ.1 ಎಂದು ಗುರುತಿಸಲಾಗಿದೆ. ನಾನು ಋಣ ಒಪ್ಪಿಗೆಯನ್ನು ಹಾಜರು ಪಡಿಸಿದ್ದು ಅದು ನಿಶಾನೆ ಪಿ.2 ಎಂದು ಗುರುತಿಸಲಾಗಿದೆ ಮತ್ತು ಕರಾರು ಪತ್ರವನ್ನು ನಿಶಾನೆ ಪಿ.3 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ</u>

ನಾನು ಪ್ರತಿವಾದಿಗೆ ರೂ.1,00,000/-ವನ್ನು ಕೊಟ್ಟಿರುತ್ತೇನೆ. ನಾನು ಹಣವನ್ನು ನಗದು ಅಥವಾ ಚೆಕ್ ಮೂಲಕ ಕೊಟ್ಟಿದ್ದೇನೆಯೇ ಎಂದು ನನಗೆ ನೆನಪಿಲ್ಲ. ನಾನು ಪ್ರತಿವಾದಿಗೆ ಸಾಕಷ್ಟು ತೊಂದರೆ ಕೊಟ್ಟ ನಂತರ ಮನೆಯನ್ನು ಬಿಟ್ಟುಕೊಟ್ಟಿದ್ದೇನೆಂದು ಸೂಚಿಸುವುದು ಸುಳ್ಳು. ಕೆಲವು ಹಿತೈಷಿಗಳ ಮಧ್ಯ ಪ್ರವೇಶದಿಂದ ಮತ್ತು ನನ್ನ ಮೇಲೆ ಪ್ರಭಾವ ಹೇರಿದ್ದರಿಂದ ನಾನು ಮನೆಯನ್ನು ಬಿಟ್ಟುಕೊಟ್ಟೆ ಎಂದು ಸೂಚಿಸುವುದು ಸುಳ್ಳು. ನಾನು ಮನೆಯನ್ನು ಬಿಟ್ಟುಕೊಟ್ಟಾಗ ಪ್ರತಿವಾದಿ ಪೂರ್ತಿ ರೂ.1,00,000/- ವನ್ನು ನನಗೆ ಮರುಪಾವತಿ ಮಾಡಿದ್ದಾನೆ ಎಂದು ಸೂಚಿಸುವುದು ಸುಳ್ಳು. ನಾನು ಮನೆಯನ್ನು ಬಿಡಲೇ ಬೇಕಾಗಿ ಬಂದಿದ್ದರಿಂದ ಪ್ರತಿವಾದಿಯ ಮೇಲೆ ಪ್ರತಿಕಾರ ತೀರಿಸುವ ಉದ್ದೇಶದಿಂದ ನಿಶಾನೆ ಪಿ.2 ಮತ್ತು 3ನ್ನು ಸೃಷ್ಟಿಸಿದ್ದೇನೆ ಎಂದು ಸೂಚಿಸುವುದು ಸುಳ್ಳು. ನನ್ನಿಂದ ಮನೆಯನ್ನು ಸ್ವಾಧೀನ ಪಡೆದುಕೊಂಡಾಗ ರಶೀದಿ ಬೇಕಾಗಿದೆ ಎಂದು ತಪ್ಪು ನಿರೂಪಣೆಯಿಂದ ನಿಶಾನೆ ಪಿ.2 ಮತ್ತು 3ಕ್ಕೆ ಸಹಿಗಳನ್ನು ಪ್ರತಿವಾದಿಯಿಂದ ಪಡೆದುಕೊಂಡಿದ್ದೆನು ಮತ್ತು ನಾನು ಅವನಿಗೆ ಮೋಸ

ಮಾಡಿದ್ದೇನೆ ಎಂದು ಸೂಚಿಸುವುದು ಸುಳ್ಳು. ಪ್ರತಿವಾದಿಗೆ ಇಂಗ್ಲೀಷ್‌ನಲ್ಲಿ ಓದಲು ಮತ್ತು ಬರೆಯಲು ಗೊತ್ತಿದೆಯೇ ಎಂದು ನನಗೆ ಗೊತ್ತಿಲ್ಲ.

ಮರುವಿಚಾರಣೆ: ಇಲ್ಲ

ಓ. ಹೇ. ಕೇ. ಸರಿ ಇದೆ
ಸಹಿ/-
ಸಿವಿಲ್ ನ್ಯಾಯಾಧೀಶರು

ಡಿ.ಡಬ್ಲ್ಯೂ.1:

ಮುಖ್ಯ ವಿಚಾರಣೆಯ ಬದಲಿಗೆ ಪ್ರತಿವಾದಿ ಸಲ್ಲಿಸಿದ ಪ್ರಮಾಣ ಪತ್ರ

ಕೆ.ಎಂ.ಪುರ, ಮೇಗಾರ ಗ್ರಾಮದ 60 ವರ್ಷ ವಯಸ್ಸಿನ ರಾಮದೇವನ ಮಗನಾದ ಮಹಾದೇವನಾದ ನಾನು ದೃಢೀಕರಿಸಿ ಪ್ರಮಾಣ ಮಾಡಿ ಈ ಕೆಳಕಂಡಂತೆ ಹೇಳುತ್ತೇನೆ.

1. ನನಗೆ ವಾದಿ ಗೊತ್ತಿದೆ ಎಂದು ಹೇಳುತ್ತಿದ್ದೇನೆ. ಅವನು ನನ್ನ ಮನೆಯನ್ನು ಬಾಡಿಗೆಗೆ ಪಡೆದುಕೊಂಡಿದ್ದನು ಎಂದು ಹೇಳುತ್ತಿದ್ದೇನೆ. ಅವನು ನನಗೆ ಮುಂಗಡ ರೂ.1,00,000/-ವನ್ನು ಕೊಟ್ಟಿದ್ದನು ಎಂದು ಹೇಳುತ್ತಿದ್ದೇನೆ.

2. ನಾನು ವಾದಿಗೆ ಐದು ವರ್ಷಗಳ ಹಿಂದೆ ಮನೆಯನ್ನು ಬಾಡಿಗೆ ಕೊಟ್ಟಿದ್ದೇನೆ ಎಂದು ಹೇಳುತ್ತಿದ್ದೇನೆ. ನಾನು ಆಗ ಬಾಡಿಗೆ ಮನೆಯಲ್ಲಿದ್ದೆ. ನನ್ನ ಮಾಲೀಕರ ಒತ್ತಡದಿಂದ ಆ ಮನೆಯನ್ನು ಖಾಲಿ ಮಾಡಿದೆ. ಆದ್ದರಿಂದ ನಾನು ಮನೆಯನ್ನು ಬಿಟ್ಟು ಕೊಡಲು ವಾದಿಗೆ ಹೇಳಿದೆನು. ಮೂರು ವರ್ಷಗಳ ಹಿಂದೆ ವಾದಿ ನನ್ನ ಮನೆಯನ್ನು ಬಿಟ್ಟು ಕೊಟ್ಟನು ಮತ್ತು ಮೂರು ವರ್ಷಗಳಿಂದ ನಾನು ಅದರಲ್ಲಿ ವಾಸವಿದ್ದೇನೆ. ವಾದಿ ನನ್ನ ಮನೆಯನ್ನು ಬಿಟ್ಟು ಕೊಡುವ ನಾಲ್ಕು ದಿವಸಗಳ ಹಿಂದೆ ನನ್ನ ಬಾಡಿಗೆ ಮನೆಯನ್ನು ಬಿಟ್ಟುಕೊಟ್ಟೆನು.

3. ವಾದಿ ನನ್ನ ಮನೆಯನ್ನು ಬಿಟ್ಟುಕೊಡುವ ಒಂದು ದಿನದ ಹಿಂದೆ ನಾನು ಅವನಿಗೆ ರೂ.1,00,000/-ವನ್ನು ಮರುಪಾವತಿ ಮಾಡಿದೆನು ಎಂದು ಹೇಳುತ್ತಿದ್ದೇನೆ.

4. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ ಎಂದು ಹೇಳುತ್ತಿದ್ದೇನೆ. ನಿಶಾನೆ ಪಿ.3 ಕರಾರು ಪತ್ರ ಆಗಿದ್ದರೂ ಹಾಗೂ ಅದರಲ್ಲಿ ನನ್ನ ಸಹಿ ಇದ್ದರೂ ನಾನು ವಾದಿ ಜೊತೆಗೆ ಯಾವುದೇ ಕರಾರು ಪತ್ರ ಮಾಡಿಲ್ಲ. ನಾನು ವಾದಿಯಿಂದ ಮನೆಯ ಸ್ವಾಧೀನವನ್ನು ಪಡೆದುಕೊಂಡಿದ್ದಕ್ಕಾಗಿ ನನಗೆ ಸಹಿ ಮಾಡಲು ಹೇಳಿದರು. ಆಪಾದಿತ ಕರಾರಿನ ವಿಷಯಗಳನ್ನು ನನಗೆ ಓದಿ ಹೇಳಿಲ್ಲ ಮತ್ತು ವಿವರಿಸಿಲ್ಲ.

5. ದಾವೆ ಸುಳ್ಳು ಎಂದು ಗೊತ್ತಿದ್ದರೂ ಪ್ರತಿಕಾರಕ್ಕಾಗಿ ಹಾಕ್ಕಿದ್ದರಿಂದ ಅದನ್ನು ಹಾನಿ ಪರಿಹಾರ ಖರ್ಚಿನ ಸಮೇತ ವಜಾ ಮಾಡಬೇಕು.

ಗುರುತಿಸಿದವರು:
ಸಹಿ/–
(ವಕೀಲರು)

ಸಹಿ/–
ಹೇಳಿಕೆ ಕೊಡುವವನು

ಮುಂದುವರಿದ ಮುಖ್ಯ ವಿಚಾರಣೆ ಪ್ರತಿವಾದಿ ಪರ ವಕೀಲರಿಂದ

ನಾನು ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಮತ್ತು ಅದಕ್ಕೆ ಸಹಿ ಮಾಡಿದ್ದೇನೆ. ಪ್ರಮಾಣ ಪತ್ರದ ವಿಷಯಗಳು ನಿಜವಿದೆ.

ಪಾಟೀ ಸವಾಲು ವಾದಿ ಪರ ವಕೀಲರಿಂದ

ನಾನು ದಿನಾಂಕ 24.8.2001ರ ನಿಶಾನೆ ಪಿ.1 ಮುಂಗಡ ರಶೀದಿಯನ್ನು ನೋಡುತ್ತಿದ್ದೇನೆ. ಅದರಲ್ಲಿ ನಿಶಾನೆ ಪಿ.1(ಎ) ರಂತೆ ನನ್ನ ಸಹಿ ಇದೆ. ನಾನು ಹೊಸದಾಗಿ ಕಟ್ಟಿಸಿದ ಮೂರನೇ ಮಹಡಿಗೆ ಸಂಬಂಧಿಸಿದ ನನ್ನ ಬಾಡಿಗೆದಾರರಿಂದ ಮುಂಗಡ ಹಣವನ್ನು ಸ್ವೀಕರಿಸಿ ವಾದಿಗೆ ರೂ.1,00,000/– ಕೊಟ್ಟ ಬಗ್ಗೆ ದಾಖಲಾತಿಗಳು ಇವೆ. 25.3.2003 ದಿನಾಂಕದ ನಿಶಾನೆ ಪಿ.2ರಲ್ಲಿ ನನ್ನ ಸಹಿ ಇದೆ ಎಂದರೆ ನಿಜ, ಆದರೆ ಅದರ ಅಡಿಯಲ್ಲಿ ಬಾಕಿ ಹಣವನ್ನು ಕೊಡುತ್ತೇನೆಂದು ಒಪ್ಪಿಕೊಂಡಿಲ್ಲ. ನಾನು ನಿಶಾನೆ ಪಿ.3 ರಂತೆ ವಾದಿ ಜೊತೆಗೆ ಕರಾರು ಪತ್ರ ಮಾಡಿಕೊಂಡಿದ್ದೇನೆಂದು ಸೂಚಿಸುವುದು ನಿಜವಲ್ಲ. ಆದರೆ ನಿಶಾನೆ ಪಿ.3(ಎ) ರಂತೆ ನನ್ನ ಸಹಿ ಇರುತ್ತದೆ. ನಿಶಾನೆ ಪಿ.3ರ ಪ್ರತಿ ನನ್ನಲಿಲ್ಲ. ನಿಶಾನೆ ಪಿ.3ರನ್ನು ಪ್ರಮಾಣೀಕರಿಸಿದವರು ಯಾರೂ ನನಗೆ ಗೊತ್ತಿಲ್ಲ. ನಾನು ಕಾನೂನು ನೋಟೀಸನ್ನು ಸ್ವೀಕರಿಸಲು ನಿರಾಕರಿಸಿದ್ದೇನೆ ಎಂದು ಸೂಚಿಸುವುದು ಸುಳ್ಳು. ನಿಶಾನೆ ಪಿ.4 ಕವರ್‌ನಲ್ಲಿ ಇರುವ ನನ್ನ ವಿಳಾಸ ಸರಿಯಿದೆ. ನಾನು ವಾದಿಗೆ ರೂ.80,000/– ಬಾಡಿಗೆ ಮುಂಗಡ ಮತ್ತು ರೂ.28,800/– ಬಡ್ಡಿ ಕೊಡಲು ಬಾಕಿ ಇದೆ ಎಂದು ಸೂಚಿಸುವುದು ಸುಳ್ಳು.
ಮರುವಿಚಾರಣೆ: ಇಲ್ಲ

ಓ. ಹೇ. ಕೇ. ಸರಿ ಇದೆ
ಸಹಿ/–
ಸಿವಿಲ್ ನ್ಯಾಯಾಧೀಶರು

ಡಿ.ಡಬ್ಲ್ಯೂ.2:

ಮುಖ್ಯ ವಿಚಾರಣೆಯ ಬದಲಿಗೆ ಸಾಕ್ಷಿ ಸಲ್ಲಿಸಿದ ಪ್ರಮಾಣ ಪತ್ರ

ಶಂಕರಾಪುರದಲ್ಲಿ ವಾಸವಿರುವ 41 ವರ್ಷ ವಯಸ್ಸಿನ ದೇವಪ್ಪನ ಮಗನಾದ ಮಾರಪ್ಪನಾದ ನಾನು ದೃಢೀಕರಿಸಿ ಪ್ರಮಾಣ ಮಾಡಿ ಈ ಕೆಳಕಂಡಂತೆ ಹೇಳುತ್ತೇನೆ.

1. ನನಗೆ ವಾದಿ ಗೊತ್ತಿದೆ ಎಂದು ಹೇಳುತ್ತಿದ್ದೇನೆ. ನಾನು ವಾದಿ ಅಂಗಡಿಯಿಂದ ಸಿಮೆಂಟ್ ಖರೀದಿ ಮಾಡುತ್ತಿದ್ದೆನು.

2. ದಿನಾಂಕ 2.4.2003ರಂದು ನಾನು ಮೇಗಾರ ಗ್ರಾಮದಲ್ಲಿರುವ ನನ್ನ ಮಗಳ ಮನೆಗೆ ಭೇಟಿ ನೀಡಿದ್ದೆನು ಮತ್ತು ರಾತ್ರಿ ಅಲ್ಲಿಯೇ ಉಳಿದುಕೊಂಡಿದ್ದೆನು ಎಂದು ಹೇಳುತ್ತಿದ್ದೇನೆ. ಆ ದಿನ ರಾತ್ರಿ ಏಳು ಗಂಟೆಗೆ ನಾನು ಮಾರ್ಕೆಟು ಕಡೆಗೆ ಹೋಗುತ್ತಿದ್ದನು. ಹಾಗೆ ವಾದಿಯ ಅಂಗಡಿಯ ಬದಿಯಲ್ಲಿ ಹೋಗುತ್ತಿದ್ದಾಗ ವಾದಿ ನನ್ನನು ಕರೆದನು. ಪ್ರತಿವಾದಿಯ ಮನೆಯನ್ನು ನಾನು ಬಾಡಿಗೆಗೆ ತೆಗೆದುಕೊಂಡಿದ್ದೆನು ಮತ್ತು ಅದನ್ನು ಬಿಟ್ಟುಕೊಟ್ಟಿದ್ದೇನೆ ಎಂದು ವಾದಿ ಹೇಳಿದನು. ಬಾಡಿಗೆ ಮುಂಗಡ ಎಷ್ಟಿತ್ತೆಂದು ನಾನು ವಾದಿಯನ್ನು ಕೇಳಿದೆನು. ರೂ.1,00,000/– ಬಾಡಿಗೆ ಮುಂಗಡವನ್ನು ಕೊಟ್ಟಿದ್ದೆನು ಎಂದು ವಾದಿ ನನಗೆ ಹೇಳಿದನು. ಅವನು ಬಾಡಿಗೆ ಮುಂಗಡವನ್ನು ಸ್ವೀಕರಿಸಿದನು ಮತ್ತು ಮನೆಯನ್ನು ಬಿಟ್ಟು ಕೊಡಬೇಕಾಗುತ್ತದೆ ಎಂದು ಅವನು ನನಗೆ ಹೇಳಿದನು. ವಾದಿ ವಾಸ ಮಾಡುತ್ತಿರುವ ಪ್ರತಿವಾದಿಗೆ ಸೇರಿದ ಮನೆಗೆ ಅವನು ನನ್ನನ್ನು ಕರೆದುಕೊಂಡು ಹೋದನು. ವಾದಿಯ ಹೇಳಿಕೆ ಮೇರೆಗೆ ಬೇರೊಬ್ಬನಿಂದ ಕರಾರು ಬರೆಸಿಕೊಂಡೆನು ಮತ್ತು ನಾನು ಸಾಕ್ಷಿಯಾಗಿ ಸಹಿ ಮಾಡಿದೆನು. ವಾದಿಯು ಮನೆಯ ಕೀಯನ್ನು ಪ್ರತಿವಾದಿಗೆ ಹಸ್ತಾಂತರಿಸಿದನು. ನಾನು ನಂತರ ಮಾರ್ಕೆಟ್‌ಗೆ ಹೋದೆನು.

3. ನನಗೆ ಇಂಗ್ಲೀಷ್ ಓದಲು ಬರೆಯಲು ಗೊತ್ತಿಲ್ಲ. ನಿಶಾನೆ ಪಿ.3ರ ವಿಷಯಗಳು ನಿಜವಲ್ಲ. ಅದಕ್ಕೆ ನಾನು ಸಹಿ ಮಾಡುವಾಗ ಅದರ ವಿಷಯವನ್ನು ನನಗೆ ಓದಿ ಹೇಳಿಲ್ಲ ಮತ್ತು ವಿವರಿಸಿಲ್ಲ.

<u>ಮುಂದುವರಿದ ಮುಖ್ಯ ವಿಚಾರಣೆ ಪ್ರತಿವಾದಿ ಪರ ವಕೀಲರಿಂದ</u>

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಮತ್ತು ಸದರಿ ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದೇನೆ. ಪ್ರಮಾಣ ಪತ್ರದ ವಿಷಯಗಳು ನಿಜವಿದೆ.

<u>ಪಾಟೀ ಸವಾಲು ವಾದಿ ಪರ ವಕೀಲರಿಂದ</u>

ಕಳೆದ ಹತ್ತರಿಂದ ಹನ್ನೆರಡು ವರ್ಷಗಳಿಂದ ಪ್ರತಿವಾದಿ ಗೊತ್ತಿದೆ. ಅವನು ಕೆ.ಎಂ.ಪುರದಲ್ಲಿ ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ನಿಶಾನೆ ಪಿ.3ನ್ನು ಯಾರೋ ವ್ಯಕ್ತಿ ಬರೆದಿರುತ್ತಾನೆ. ಎರಡು ಅಥವಾ ಮೂರು ವ್ಯಕ್ತಿಗಳು ಅವಾಗ ಹಾಜರಿದ್ದರು. ಅವರ ಹೆಸರುಗಳು ನನಗೆ ಗೊತ್ತಿಲ್ಲ. ಅದರ ವಿಷಯಗಳನ್ನು ಓದಿ ವಿವರಿಸಲು ನಾನು ವಾದಿಯನ್ನಾಗಲಿ ಅಥವಾ ನಿಶಾನೆ ಪಿ.3ರ ಬರಹಗಾರರನ್ನಾಗಲಿ ಕೇಳಲಿಲ್ಲ. ಕೀಯನ್ನು ನನ್ನ ಸಮಕ್ಷಮ ಹಸ್ತಾಂತರಿಸಲಾಯಿತು. ವಾದಿ ವಾಸವಿರುವ ಪ್ರತಿವಾದಿಗೆ ಸೇರಿದ ಮನೆಯಲ್ಲಿ ನಿಶಾನೆ ಪಿ.3ಕ್ಕೆ ಸಹಿ ಮಾಡಿದೆನು. ನನ್ನ ಸಮಕ್ಷಮ ನಿಶಾನೆ ಪಿ.3ಕ್ಕೆ ಸಹಿ ಮಾಡಿದ ಇತರರ

ಹೆಸರುಗಳು ಗೊತ್ತಿಲ್ಲ. ನನ್ನ ಸಮಕ್ಷಮ ವಾದಿಯು ಪ್ರತಿವಾದಿಗಾಗಲಿ ಅಥವಾ ಪ್ರತಿವಾದಿಯು ವಾದಿಗಾಗಲಿ ಏನ್ನನ್ನೂ ಪಾವತಿಸಲಿಲ್ಲ.

ಮರುವಿಚಾರಣೆ: ಇಲ್ಲ

ಓ. ಹೇ. ಕೇ. ಸರಿ ಇದೆ
ಸಹಿ/-
ಸಿವಿಲ್ ನ್ಯಾಯಾಧೀಶರು

## ದಸ್ತಾವೇಜುಗಳು

### ನಿ.ಪಿ.1

**ಬಾಡಿಗೆ ಮುಂಗಡ ರಶೀದಿ**

ರಾಮದೇವರವರ ಮಗನಾದ ಮಹಾದೇವನಾದ ನಾನು ಕೆ.ಎಂ.ಪುರದ ಮನೆ ನಂ.5ರ ಮಾಲೀಕನಾಗಿದ್ದು ವೆಂಕಣ್ಣನ ಮಗನಾದ ರಾಜಣ್ಣನಿಗೆ ತಿಂಗಳ ಬಾಡಿಗೆ ರೂ.10,000/- (ರೂಪಾಯಿ ಹತ್ತು ಸಾವಿರ ಮಾತ್ರ) ಕ್ಕೆ ಸದರಿ ಮನೆಯನ್ನು ಬಾಡಿಗೆ ಕೊಡುವುದಾಗಿ ಒಪ್ಪಿಕೊಂಡಿದ್ದೆನು.

ಈಗ ನಾನು ಮುಂಗಡ ಬಾಡಿಗೆ/ಭದ್ರತೆ ಠೇವಣಿಯಾಗಿ ರೂ.1,00,000/- ವನ್ನು ಸ್ವೀಕರಿಸಿದ್ದೇನೆ. ಅದಕ್ಕೆ ಯಾವುದೇ ಬಡ್ಡಿ ಇರುವುದಿಲ್ಲ, ಆ ಹಣವನ್ನು ಕೂಡಲೇ ಮರುಪಾವತಿ ಮಾಡದಿದ್ದಲ್ಲಿ ಮಾತ್ರ ಅದಕ್ಕೆ ವಾರ್ಷಿಕ ಶೇಕಡ 12ರಂತೆ ಬಡ್ಡಿಯಾಗುತ್ತದೆ.

ಸ್ಥಳ: ಕೆ.ಎಂ.ಪುರ
ದಿನಾಂಕ: 24.8.2001

ಸಹಿ/-
ಮಹಾದೇವ

### ನಿ.ಪಿ.2

**ಋಣದ ಒಪ್ಪಿಗೆ**

2003 ಮಾರ್ಚ್ 25ರಂದು ರಾಮದೇವನ ಮಗನಾದ ಮಹಾದೇವನಾದ ನಾನು 24.08.2001 ದಿನಾಂಕದ ಬಾಡಿಗೆ ಮುಂಗಡ ರಶೀದಿಯಡಿಯಲ್ಲಿ ವೆಂಕಣ್ಣನ ಮಗನಾದ ರಾಜಣ್ಣ ಪಾವತಿಸಿದ ರೂ.1,00,000/- ಬಾಡಿಗೆ ಮುಂಗಡ ಹಣದಲ್ಲಿ ರೂ.20,000/- (ರೂಪಾಯಿ ಇಪ್ಪತ್ತೂ ಸಾವಿರಗಳು ಮಾತ್ರ) ವನ್ನು ನಾನು ಮರುಪಾವತಿಸಿದ್ದೇನೆ. ಬಾಕಿ ರೂ.80,000/- (ರೂಪಾಯಿ ಎಂಬತ್ತು ಸಾವಿರಗಳು ಮಾತ್ರ) ವನ್ನು ಎಂಟು ಪ್ರತಿ ತಿಂಗಳ ಕಂತುಗಳಲ್ಲಿ ಪಾವತಿಸುತ್ತೇನೆ. ಬಾಕಿ ಹಣ ರೂ.80,000/- ಕ್ಕೆ ನಾನು ಈ ಮೂಲಕ ಬದ್ಧನಿರುತ್ತೇನೆ.

ನಾನು ಕೆ.ಎಂ.ಪುರದ ಮನೆ ನಂ.5ರ ಸ್ವಾಧೀನ ತೆಗೆದುಕೊಂಡಿದ್ದೇನೆ ಮತ್ತು ಇದುವರೆಗಿನ ಮನೆ ಬಾಡಿಗೆಯನ್ನು ಸ್ವೀಕರಿಸಿದ್ದೇನೆ.

ಸಹಿ/–
ಮಹಾದೇವ

<u>ಸಾಕ್ಷಿದಾರರು</u>

1. ಬಸಪ್ಪ
2. ನಾರಾಯಣಪ್ಪ

**<u>ನಿ.ಪಿ.3</u>**

<u>ಕರಾರು ಪತ್ರ</u>

2003ನೇ ಇಸವಿ ಏಪ್ರಿಲ್ ತಿಂಗಳ 2ನೇ ತಾರೀಖಿನಂದು ಕೆ.ಎಂ.ಪುರ, ಮೇಗಾರ ಗ್ರಾಮದ 57 ವರ್ಷ ವಯಸ್ಸಿನ ರಾಮದೇವನ ಮಗನಾದ ಮಹಾದೇವ ಒಂದನೇ ಪಾರ್ಟಿಯವರಾಗಿ ಅವನ ಕಾನೂನು ವಾರಿಸುದಾರರು, ಕಾರ್ಯ ನಿರ್ವಾಹಕರು ಮತ್ತು ಹಸ್ತಾಂತರಗ್ರಾಹಿಗಳು ಸೇರಿದ್ದು ಮತ್ತು ಅರ್ಥೈಸಿದ್ದು ಒಂದು ಭಾಗ ಮತ್ತು ಕೆ.ಎಂ.ಪುರ ಮೇಗಾರ ಗ್ರಾಮದ 52 ವರ್ಷ ವಯಸ್ಸಿನ ವೆಂಕಣ್ಣನ ಮಗನಾದ ರಾಜಣ್ಣ ಎರಡನೇ ಪಾರ್ಟಿಯವರಾಗಿ ಅವನ ಕಾನೂನು ವಾರಿಸುದಾರರು, ಕಾರ್ಯ ನಿರ್ವಾಹಕರು ಮತ್ತು ಹಸ್ತಾಂತರಗ್ರಾಹಿಗಳು ಸೇರಿದ್ದು ಮತ್ತು ಅರ್ಥೈಸಿದ್ದು ಇನ್ನೊಂದು ಭಾಗವಾಗಿ ಮಾಡಿಕೊಂಡ ಈ ಕರಾರು ಪತ್ರದ ಕ್ರಮವೇನೆಂದರೆ:

ಒಂದನೇ ಪಾರ್ಟಿಯವರು ಕೆ.ಎಂ.ಪುರ ಮನೆ ನಂ.5ರ ಕಾನೂನುಬದ್ಧ ಮಾಲೀಕರು ಮತ್ತು ಭೂ ಮಾಲೀಕರು ಆಗಿದ್ದು ಎರಡನೇ ಪಾರ್ಟಿಯವರು ಆ ಮನೆಯ ಬಾಡಿಗೆದಾರರಾಗಿದ್ದು ಬಾಡಿಗೆ ಮುಂಗಡ ರೂ.1,00,000/– ವನ್ನು ಒಂದನೇ ಪಾರ್ಟಿಯವರಿಗೆ ಆ ಮನೆಯ ಬಗ್ಗೆ ಕೊಟ್ಟಿದ್ದರು. ಒಂದನೇ ಪಾರ್ಟಿ ಭೂ ಮಾಲೀಕರು ದಿನಾಂಕ 25.3.2003ರಂದು ಎರಡನೇ ಪಾರ್ಟಿಯವರಿಗೆ ರೂ.20,000/– (ರೂಪಾಯಿ ಇಪ್ಪತ್ತು ಸಾವಿರ ಮಾತ್ರ) ವನ್ನು ನಗದಾಗಿ ಮರುಪಾವತಿ ಮಾಡಿದ್ದರು ಮತ್ತು ಬಾಕಿ ಬಾಡಿಗೆ ಮುಂಗಡವಾಗಿ ರೂ.80,000/– (ರೂಪಾಯಿ ಎಂಬತ್ತು ಸಾವಿರ ಮಾತ್ರ)ವನ್ನು ಎಂಟು ಸಮ ಕಂತುಗಳಲ್ಲಿ ಪ್ರತಿ ಕ್ಯಾಲೆಂಡರ್ ತಿಂಗಳ ಒಂದರಂದು ತಪ್ಪದೇ ಪಾವತಿಸುವುದಾಗಿ ಒಪ್ಪಿರುತ್ತಾರೆ. ಯಾವುದೇ ತಿಂಗಳ ಕಂತನ್ನು ಪಾವತಿಸಲು ತಪ್ಪಿದ್ದಲ್ಲಿ ವಾರ್ಷಿಕ ಶೇಕಡ 12ರಂತೆ ಬಡ್ಡಿ ಪಾವತಿಸುವುದಾಗಿ ಒಂದನೇ ಪಾರ್ಟಿಯವರು ಮುಂದುವರೆದು ಒಪ್ಪಿರುತ್ತಾರೆ.

2003 ಏಪ್ರಿಲ್ ತಿಂಗಳ 2ನೇ ತಾರೀಖಿನಂದು ಕೆ.ಎಂ.ಪುರದಲ್ಲಿ ಒಂದನೇ ಪಾರ್ಟಿ ಮತ್ತು ಎರಡನೇ ಪಾರ್ಟಿಯವರು ಈ ಕರಾರು ಪತ್ರಕ್ಕೆ ಸಾಕ್ಷಿದಾರರ ಸಮಕ್ಷಮ ಸಹಿ ಮಾಡಿರುತ್ತಾರೆ.

ಸಹಿ/–
ಮಹಾದೇವ

ಸಹಿ/–
ರಾಜಣ್ಣ

ಪಂಚಾಯ್ತುದಾರರು

1. ನಾರಾಯಣಪ್ಪ
2. ಮಾರಪ್ಪ

## ನಿ.ಪಿ.4

"ತಿರಸ್ಕರಿಸಿದ್ದಾರೆ" ಎಂಬ ಹಿಂಬರಹದೊಂದಿಗೆ ವಾದಿಯ ವಕೀಲರಿಗೆ ವಾಪಸ್ಸಾದ ಪ್ರತಿವಾದಿಯ ವಿಳಾಸವಿರುವ ನೊಂದಾಯಿತ ಅಂಚೆ ಲಕೋಟೆ.

## ನಿ.ಪಿ.5

ವಾದಿ ಪ್ರತಿವಾದಿಗೆ ಬಾಕಿ ಬಾಡಿಗೆ ಮುಂಗಡ ರೂ.80,000/– ಅದಕ್ಕೆ ವಾರ್ಷಿಕ ಶೇಕಡ 12 ಬಡ್ಡಿ ಮತ್ತು ವಕೀಲರ ಫೀ ರೂ.1,000/– ಕೊಡುವಂತೆ ಕೋರಿ ಕಳಿಸಿದ 5.1.2006ರ ದಿನಾಂಕದ ತಗಾದೆ ನೋಟೀಸಿನ ಪ್ರತಿ.

ಪ್ರತಿವಾದಿಯ ದಸ್ತಾವೇಜುಗಳು – ಇಲ್ಲ

*********

HIGH COURT OF KARNATAKA
ಕರ್ನಾಟಕ ಉಚ್ಚ ನ್ಯಾಯಾಲಯ

CIVIL JUDGE MAIN WRITTEN EXAMINATION-2019
ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ – 2019

## LAW PAPER III
## ಕಾನೂನು ಪತ್ರಿಕೆ – III

## Framing of charges and writing of a Judgment in Criminal Case
ಅಪರಾಧ ಪ್ರಕರಣಗಳಲ್ಲಿ ಆರೋಪಣೆಗಳನ್ನು ರೂಪಿಸುವುದು ಮತ್ತು ತೀರ್ಪನ್ನು ಬರೆಯುವುದು

Date: 31.03.2019
ದಿನಾಂಕ: 31ನೇ ಮಾರ್ಚ್ 2019

Max. Marks: 100
ಗರಿಷ್ಠ ಅಂಕಗಳು: 100

Time: 2.00 PM to 5.00 PM
ಸಮಯ: ಮಧ್ಯಾಹ್ನ 2.00 ರಿಂದ 5.00 ಗಂಟೆ

**Instructions:**

1. Option is given to the candidates to write answers either in English or in Kannada

   ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ.

2. If there is any discrepancy in the questions in English language and Kannada language, the questions as framed in English language shall prevail.

   ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ಲೋಪ ಕಂಡುಬಂದಲ್ಲಿ, ಆಂಗ್ಲ ಭಾಷೆಯಲ್ಲಿ ರೂಪಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

3. Write your register number only on the cover page in the space provided and nowhere else. You must not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

   ನಿಮ್ಮ ರಿಜಿಸ್ಟರ್ ನಂಬರನ್ನು ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

**1. Frame proper plea in the following case.**

**Marks: 10**

**C C 720/2016**

**Complainant:** Smt.Renuka

And

**Accused:** Raghavendra

The complainant and accused are known to each other through one of the relative of the complainant and as such they have been family friends since few years. The accused being in dire requirement of some amount on his personal and domestic problems approached the complainant and took a hand loan of Rs.2,50,000/-. In order to repay the above said amount, the accused had issued a cheque bearing No.953639 dated 20.2.2015 for Rs.2,50,000/- drawn on Dena Bank Ltd, K.M.Pura Branch in favour of the complainant. On assurance of the accused, the above said cheque was presented for payment through the Dena Bank Ltd, K.M.Pura Branch by the complainant, which was returned with an endorsement "Funds insufficient" on 6.3.2015. The legal notice was issued by the complainant on 17.3.2015 calling upon the accused to pay the cheque amount. Inspite of service of notice, the accused neither replied to the said notice nor paid the cheque amount. Hence complainant filed the complaint before JMFC Court, K.M.Pura.

**2. Frame appropriate charge for the Trial of an accused on the basis of the following charge sheet materials.**

**Marks: 15**

It is alleged that the Accused No.1 to 4 Raju, Kempa, Mahesh and Chandra were under the impression that CW1 Syed knows where about of his friend Imran and the wife of Accused No.1. In

this regard, on 18.2.2013 at about 8.30 p.m., the accused No.1 to 4 with the common intention to commit an offence came near Kempapura Main Road in Maruti Car bearing No.KA-18 ML 6060 and called CW1 over mobile phone and asked him to come to the said spot and when CW1 along with CW2 came to the said spot, the accused No.1 to 4 forcibly took both of them in their car and abducted them to Gollarahalli with intent to secretly and wrongfully confine them in the house of the friend of Accused No.3 Mahesh. Accused No.1 Raju by means of club, Accused No.3 Mahesh, by means of steel rod and Accused No.2 Kempa and Accused No.4 Chandra with their hands assaulted them and caused simple injuries and also threatened that they would take away their life if they inform the said incident to the police.

The complainant gave first information to the Kempapura police station. Police after investigation filed charge sheet alleging offences punishable under Section 365, 342, 323, 324 and 506 r/w Section 34 of the Indian Penal Code, 1860.

**3. Write a considered judgment in the following case by giving valid and cogent reasons assuming rival contentions from the facts.** **Marks: 75**

Judicial Magistrate of First Class, K.M.Pura

CC 615/2010

**Complainant:** State of Karnataka
represented by
Kempapura police station

**Vs**

**Accused:** Shivanna
S/o Ramanna
Aged 40 years
Shanthinagar, K.M.Pura.

**Facts of the Case:**

On 2.9.2010 at about 7.45 p.m., one Nagaraj S/o Subash, aged 18 years, resident of Shanthinagar, K.M.Pura Taluk, visited Kempapura Police Station along with his mother Savithramma and gave his written complaint to the Sub-Inspector of Police against Shivanna S/o Ramanna of his village alleging that on 2.9.2010 at about 1.00 p.m., the complainant Nagaraj and his servant Subba were cutting the branches of a jack-fruit tree, by climbing it, nearby the house of the complainant and at that time, the accused Shivanna appeared there holding a sickle and started beating the complainant with hands and when his mother Savithramma came to his rescue, the accused assaulted her with sickle causing a bleeding injury on her left hand.

On that complaint of Nagaraj, the P.S.I., registered a case in Cr.No.36/2010 for the offence punishable under Section 323 and 324 I.P.C., against the accused Shivanna. He dispatched F.I.R., to the learned Judicial Magistrate of the First Class (J.M.F.C.) at K.M.Pura, conducted investigation and on completion of the investigation, he filed charge sheet against the accused for the offence punishable under Section 323 and 324 of the Indian Penal Code, 1860.

Charges were read over to the accused. He pleaded not guilty to the charges.

To establish the charges against the accused at the trial before the learned Magistrate, the prosecution let in the evidence of the complainant Nagaraja, his mother Savithramma, the medical

witness Dr.Anubhav and Investigation Officer as PW1, PW2, PW3 and PW4 respectively.

<u>PW1 – Nagaraja</u> Duly sworn on 16.8.2011
<u>Examination in Chief by APP</u>

I am living with my parents in the house situated at Shanthinagar, K.M.Pura Taluk. It is about 3 K.M. distance from Kempapura Police Station. There is a jack-fruit tree near my house. On the day of the incident at about 1.00 p.m., I and my servant Subba were engaged in cutting branches of the said tree. We both had climbed the tree. At that time, the accused came there holding a sickle and began shouting at me saying "the tree belongs to me, why are you cutting its branches?". Then I started getting down from the tree. At that time, the accused assaulted me with his hands. Just then my mother Savithramma came to the spot and intervened to prevent him from assaulting me. The accused then assaulted her with his sickle on her left hand and caused a cut injury at the wrist. After so assaulting her, he went away from the spot.

Thereafter, on the same day i.e., on 2.9.2010 at about 7.45 p.m., I and my mother both visited Kempapura Police Station and gave my written complaint to the P.S.I. against the accused. Ex.P1 is the complaint. I have signed it at Ex.P1(a). Then the P.S.I. sent my mother to the hospital. M.O.1 is the said sickle.

Next day morning, P.S.I. visited the spot of offence and examined it in the presence of two Panchas. I pointed out the spot to him. M.O.1 was lying at the spot itself. P.S.I. prepared the spot Mahazar i.e., Panchanama, which is at Ex.P2 and seized M.O.1 thereunder.

<u>Cross examination by Sri K P K Advocate for accused:</u>

The accused is my paternal uncle. The agricultural property situated adjacent to my house property belongs to accused. It is under his personal cultivation. These two properties are divided by a ridge running between them. It is true that the said jack-fruit tree exists just by the side of this ridge. It is true that there is a land dispute between my parents and the accused. It is true to suggest that the said tree lies in the land of the accused.

The accused did not scold my servant Subba. I was getting down from the tree first when the accused attempted to assault me. It is not true to suggest that the accused neither intended to assault me nor did he assault my mother Savithramma with sickle.

Sickle like M.O.1 is available in my house. It is not true to suggest that sickle was not brought and left at the spot by the accused. It is not true to suggest that my mother sustained her injury on being hit by the sickle M.O.1 accidentally when she was cutting and clearing bushes in our property.

We came to Kempapura by bus from our village. Many buses ply to Kempapura via our village. It is not true to suggest that Ex.P1 was not given by me to the P.S.I., on 2.9.2010. It is not true to suggest that I have given false complaint as Ex.P1 against the accused to take revenge against him.

Re-examination: Nil

R.O.I & A.C
Sd/-
JMFC.

PW2 - Savitharamma — Duly sworn on 16.8.2011
Examination in Chief by APP

PW.1 Nagaraj is my son. At the time of incident, I was standing outside our house. PW1 and our servant Subba were then cutting the branches of a jack-fruit tree situated in our property. The accused came from his neighbouring land and began quarrelling with us stating that the said tree is in his land and it belongs to him. Nagaraj and Subba started getting down from the tree. The accused attempted to assault my son. Then I intervened to pacify and prevent him from assaulting my son Nagaraj. He then suddenly assaulted me with a sickle on my left hand. I sustained a bleeding injury on my left wrist. M.O.1 is the said sickle.

After incident, I and Nagaraj both visited Kempapura Police Station and gave our complaint to the Police. The police sent me to the hospital for my treatment. I was examined by a Doctor in that hospital.

Cross examination by Sri K P K Advocate for Accused:

The accused came to the spot holding a sickle. Nagaraj was getting down from the tree when the accused assaulted me with sickle. Subba is no longer our servant. He lives in our village. It is not true to suggest that the accused did not come to the spot armed with sickle. It is not true to suggest that M.O.1 sickle belongs to us and it does not belong to the accused. It is not true to suggest that sickle was produced by us before the police.

It is not true to suggest that I sustained injury on my hand when I was accidentally hit by M.O.1 sickle while I was cutting and

clearing bushes in our land. It is not true to suggest that I am deposing falsely against accused.

Re-examination: Nil.

R.O.I & A.C<br>Sd/-<br>JMFC

PW3 - Dr.Anubhav — Duly sworn on 6.9.2011

Examination in Chief by APP

I am working as an Assistant Surgeon in the Government Hospital at K.M.Pura.

On 2.9.2010 at 8.15 p.m., PW2 Smt.Savithramma came to the hospital accompanied by her son Nagaraj, with the history of sustaining an injury on her left hand due to assault made by one Shivanna. Then I examined her and noticed the following injury on her hand:

> "An incised wound of the size 1/2" x 1/2"
> at the posterior aspect of her left wrist".

It was a simple injury. It could be caused with a weapon like M.O.1 sickle. Ex.P3 is the Wound Certificate of PW2 issued by me to the Investigating Officer.

Cross examination Sri K P K Advocate for Accused:

The age of the injury is not noted by me in Ex.P3. Such an injury could be caused by any sharp edged weapon or object. It could be caused if M.O.1 sickle accidentally hits the hand of a person engaged in cutting and clearing bushes with it.

The above stated injury of PW2 was not a serious injury. If she was assaulted forcibly on her hand with M.O.1, the injury caused to her could have been more serious in nature.

Re-examination: Nil.

R.O.I & A.C
Sd/-
JMFC

<u>PW4 – Laxmi Narayan</u> <u>Duly sworn on 06.09.2011</u>
<u>Examination in Chief by APP</u>

I have been working as P.S.I. of Kempapura Police Station for the last about three years.

On 2.9.2010 at about 7.45 p.m., PW1 Nagaraj came to the Police Station along with his mother PW2 Savithramma and gave his written complaint at Ex.P1 to me. On its basis, I registered a case in Cr.No.36/2010 of Kempapura Police Station u/s 323 and 324 I.P.C. against accused. I prepared and dispatched the F.I.R. at Ex.P4 to the learned J.M.F.C., K.M.Pura through P.C.No.313 by name Jayaram. Then I sent PW2 Savithramma to the Government Hospital, K.M.Pura. After she was examined by the Doctor, I examined her and recorded her statement.

Next day morning, I visited the scene of offence and inspected in the presence of two panchas by name Rama and Balu. The spot of incident was pointed out to us by PW1. M.O.1 sickle was found lying at the spot. I prepared the spot panchanama i.e., Mahazar, which is at Ex.P2 and seized M.O.1. Then I examined and recorded the statements of Subba and PW1's father Subhash.

Subsequently, on 20.9.2010, I arrested the accused in his village and produced him before the learned Magistrate for his remand to judicial custody (J.C.).

On 20.11.2010, I collected Ex.P3 Wound Certificate from PW3 Dr.Anubhav. On completion of the investigation, I submitted chargesheet to the Court of the J.M.F.C., K.M.Pura on the same day.

Cross examination by Sri K P K Advocate for accused:

It is true that, as disclosed by the endorsement of the learned Magistrate, Ex.P4 FIR was delivered to him at 1.30 p.m. on 3.9.2010. It is not true to suggest that Ex.P1 was given to me by PW1 on 3.9.2010 at 11.00 a.m., not at 7.45 p.m. on 2.9.2010. There was no blood found on the spot of incident. It is true that the jack-fruit tree was standing by the side of a ridge between the property of CW1 and Accused. I did not verify any documents or khatha entries to ascertain the owners thereof. I do not know in whose land the said jack-fruit tree was standing. There were wild bushes near the place of offence.

It is not true to suggest that I did not send PW2 Savithramma to the hospital. It is not true to suggest that I have foisted a false case against accused at the instance of PW1 and his parents.

**Accused statement U/s 313 of the Code of Criminal Procedure:**

The accused was examined under Section 313 of the Code of Criminal Procedure by the learned Magistrate. He denied all the incriminating circumstances. He has stated that he did ask PW1

why he was cutting the branches of the said tree as it was in his land.

**Substance of arguments:**

The learned Assistant Public Prosecutor (APP) has argued that the evidence of PW1 and PW2 on all material particulars of the alleged incident is consistent and cogent. It also finds ample corroboration from the evidence of PW3 and PW4 and the contents of proved documents Ex.P1 to Ex.P4. It is free from all major infirmities. Therefore, it is sufficient to establish charges levelled against the accused. He argued that the accused is liable to be convicted for the alleged offences.

The learned counsel for the accused has argued that the prosecution evidence is full of material contradictions, omissions and discrepancies on material points. Ex.P1 complaint contradicts PW1 in regard to manner of occurrence. The version of incident as given by PWs.1 and 2 is inherently improbable. The evidence of PW3 Dr.Anubhav does not corroborate it, but it supports the defence version of the incident. Scribe of Ex.P1 complaint and Ex.P4 F.I.R. are material witnesses. Non-examination of scribe of Ex.P1 and Ex.P4 by the prosecution is a vital legal infirmity. The prosecution has not examined the Mahazar witnesses. Hence, place of incident is not proved by the prosecution. Therefore, he prayed for acquittal of the accused for the charges levelled against him.

*******

## ಕಾನೂನು ಪತ್ರಿಕೆ – III

## ಅಪರಾಧ ಪ್ರಕರಣದಲ್ಲಿ ದೋಷಾರೋಪಣೆ ರೂಪಿಸುವುದು ಮತ್ತು ತೀರ್ಪನ್ನು ಬರೆಯುವುದು

**1.** ಈ ಕೆಳಗಿನ ಪ್ರಕರಣದಲ್ಲಿ ಸರಿಯಾದ ಆರೋಪಣೆಯನ್ನು ರೂಪಿಸಬೇಕು. ಅಂಕಗಳು: **10**

**ಸಿ.ಸಿ.720/2016**

ಫಿರ್ಯಾದುದಾರಳು: ಶ್ರೀಮತಿ ರೇಣುಕ

**ವಿರುದ್ಧ**

ಆರೋಪಿ: ರಾಘವೇಂದ್ರ

ಫಿರ್ಯಾದುದಾರಳ ಒಬ್ಬ ಸಂಬಂಧಿಯ ಮುಖಾಂತರ ಫಿರ್ಯಾದುದಾರಳು ಮತ್ತು ಆರೋಪಿ ನಡುವೆ ಪರಸ್ಪರ ಪರಿಚಯವಾಗಿದೆ ಮತ್ತು ಅವರು ಕೆಲವು ವರ್ಷಗಳಿಂದ ಕುಟುಂಬ ಸ್ನೇಹಿತರಾಗಿದ್ದಾರೆ. ಆರೋಪಿಗೆ ತನ್ನ ವೈಯಕ್ತಿಕ ಮತ್ತು ಗೃಹ ಕೃತ್ಯದ ತೊಂದರೆಗೋಸ್ಕರ ಸ್ವಲ್ಪ ಹಣದ ಅವಶ್ಯಕತೆ ಇದ್ದು ಫಿರ್ಯಾದುದಾರಳನ್ನು ಭೇಟಿ ಮಾಡಿ ರೂ.2,50,000/– ಹಣವನ್ನು ಕೈಗಡ ಸಾಲವಾಗಿ ಪಡೆದುಕೊಂಡಿದ್ದನು. ಆ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ಕೆ.ಎಂ.ಪುರ ಶಾಖೆಯ ದೇನಾ ಬ್ಯಾಂಕ್ ಲಿಮಿಟೆಡ್‌ನ ದಿನಾಂಕ 20.2.2015ರ ಚೆಕ್ ನಂ.953639ನ್ನು ಆರೋಪಿಯು ಫಿರ್ಯಾದುದಾರಳಿಗೆ ನೀಡಿದ್ದನು. ಆರೋಪಿಯ ಭರವಸೆ ಮೇರೆಗೆ ಫಿರ್ಯಾದುದಾರಳು ಸದರಿ ಚೆಕ್ಕನ್ನು ಕೆ.ಎಂ.ಪುರ ಶಾಖೆಯ ದೇನಾ ಬ್ಯಾಂಕ್ ಲಿಮಿಟೆಡ್ ಮೂಲಕ ನಗದೀಕರಣಕ್ಕಾಗಿ ಸಲ್ಲಿಸಿದಾಗ ದಿನಾಂಕ 6.3.2015ರಂದು ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂದು ಹಿಂಬರಹದೊಂದಿಗೆ ವಾಪಸ್ಸು ಬಂದಿದೆ. ದಿನಾಂಕ 17.3.2015ರಂದು ಫಿರ್ಯಾದುದಾರಳು ಆ ಚೆಕ್ಕಿನ ಹಣವನ್ನು ಕೊಡುವಂತೆ ಕೋರಿ ವಕೀಲರ ನೋಟೀಸನ್ನು ಆರೋಪಿಗೆ ನೀಡಿರುತ್ತಾಳೆ. ಆ ನೋಟೀಸು ಜಾರಿಯಾದ ನಂತರವೂ ಆರೋಪಿ ಆ ನೋಟೀಸಿಗೆ ಉತ್ತರವನ್ನಾಗಲೀ ಅಥವಾ ಚೆಕ್ಕಿನ ಹಣವನ್ನು ಪಾವತಿ ಮಾಡುವುದಾಗಲೀ ಮಾಡಿಲ್ಲ. ಆದ್ದರಿಂದ ಕೆ.ಎಂ.ಪುರ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಫಿರ್ಯಾದುದಾರಳು ದೂರನ್ನು ಸಲ್ಲಿಸಿರುತ್ತಾಳೆ.

**2.** ಈ ಕೆಳಗೆ ತೋರಿಸಿದ ದೋಷಾರೋಪಣ ಪತ್ರದಲ್ಲಿ ಪ್ರಸ್ತಾಪಿಸಿದ ಮಾಹಿತಿಗಳ ಆಧಾರದ ಮೇಲೆ ಆರೋಪಿತರ ವಿರುದ್ಧ ದೋಷಾರೋಪಣೆ ಅಥವಾ ಆರೋಪಣೆಯನ್ನು ರೂಪಿಸಿ ಅಂಕಗಳು: **15**

ಚಾ.ಸಾ.1 ಸೈಯದ್‌ನ ಗೆಳೆಯನಾದ ಇಮ್ರಾನ್ ಮತ್ತು 1ನೇ ಆರೋಪಿಯ ಹೆಂಡತಿ ಎಲ್ಲಿದ್ದಾರೆಂದು ಚಾ.ಸಾ.1 ರವರಿಗೆ ಗೊತ್ತಿದೆ ಎಂದು 1 ರಿಂದ 4ನೇ ಆರೋಪಿತರಾದ ರಾಜು, ಕೆಂಪ, ಮಹೇಶ ಮತ್ತು ಚಂದ್ರ ಕಲ್ಪನೆಯಲ್ಲಿದ್ದರು. ಈ ಬಗ್ಗೆ ದಿನಾಂಕ 18.2.2013ರಂದು ರಾತ್ರಿ 8.30 ಗಂಟೆಗೆ ಕೃತ್ಯವೆಸಗುವ ಸಮಾನ

ಉದ್ದೇಶದಿಂದ 1 ರಿಂದ 4ನೇ ಆರೋಪಿತರು ಮಾರುತಿ ಕಾರಿನಲ್ಲಿ ಕೆಂಪಾಪುರ ಮುಖ್ಯ ರಸ್ತೆಗೆ ಬಂದಿದ್ದರು ಮತ್ತು ಚಾ.ಸಾ.1 ಆ ಜಾಗಕ್ಕೆ ಬರಬೇಕೆಂದು ಮೊಬೈಲ್ ಫೋನಿನಿಂದ ಚಾ.ಸಾ.1ರವರನ್ನು ಕರೆಸಿದ್ದರು ಮತ್ತು ಚಾ.ಸಾ.1ರವರು ಚಾ.ಸಾ.2ರವರ ಜೊತೆಗೆ ಸದರಿ ಜಾಗಕ್ಕೆ ಬಂದಾಗ 1 ರಿಂದ 4 ಆರೋಪಿತರು ಒತ್ತಾಯ ಪೂರ್ವಕವಾಗಿ ಅವರನ್ನು ಕಾರಿನಲ್ಲಿ ಕರೆದುಕೊಂಡು ಗೊಲ್ಲರಹಳ್ಳಿಯಲ್ಲಿ ಇರುವ 3ನೇ ಆರೋಪಿ ಮಹೇಶನ ಗೆಳೆಯನ ಮನೆಯಲ್ಲಿ ರಹಸ್ಯವಾಗಿ ಮತ್ತು ಅಕ್ರಮವಾಗಿ ಬಂಧನದಲ್ಲಿರಿಸುವ ಉದ್ದೇಶದಿಂದ ಅಪಹರಿಸಿರುತ್ತಾರೆ. 1ನೇ ಆರೋಪಿ ರಾಜು ದೊಣ್ಣೆಯಿಂದ, 3ನೇ ಆರೋಪಿ ಮಹೇಶ ಸ್ಟೀಲ್ ರಾಡಿನಿಂದ, 2ನೇ ಆರೋಪಿ ಕೆಂಪ ಮತ್ತು 4ನೇ ಆರೋಪಿ ಚಂದ್ರ ಕೈಗಳಿಂದ ಅವರಿಗೆ ಹಲ್ಲೆ ಮಾಡಿರುತ್ತಾರೆ ಮತ್ತು ಸಾದಾ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ ಮತ್ತು ಈ ಘಟನೆ ಬಗ್ಗೆ ಪೋಲಿಸರಿಗೆ ತಿಳಿಸಿದ್ದಲ್ಲಿ ಜೀವವನ್ನು ತೆಗೆಯುತ್ತೇವೆ ಎಂದು ಬೆದರಿಕೆ ಒಡ್ಡಿರುತ್ತಾರೆ.

ಫಿರ್ಯಾದುದಾರ ಕೆಂಪಾಪುರ ಪೋಲೀಸು ಠಾಣೆಗೆ ಪ್ರಥಮ ಮಾಹಿತಿಯನ್ನು ನೀಡಿರುತ್ತಾನೆ. ಪೋಲಿಸರು ತನಿಖೆ ನಂತರ ಭಾರತ ದಂಡ ಸಂಹಿತೆ, 1860ರ ಕಲಂ 365, 342, 323, 324 ಮತ್ತು 506 ಸಹವಾಚಕ 34ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧ ಮಾಡಿದ್ದಾರೆಂದು ಅಪಾದಿಸಿ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

**3. ಸಂಗತಿಗಳಿಂದ ಎದುರಾಳಿಗಳ ವಾದ ಭಾವಿಸಿಕೊಂಡು ಸಮಂಜಸ ಮತ್ತು ತರ್ಕಬದ್ಧ ಸಮರ್ಥನಾಂಶಗಳನ್ನು ನೀಡಿ ಈ ಕೆಳಗಿನ ಪ್ರಕರಣದಲ್ಲಿ ತೀರ್ಪನ್ನು ನೀಡಿ** **ಅಂಕಗಳು: 75**

<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕೆ.ಎಂ.ಪುರ</u>

<u>ಸಿ.ಸಿ.ನಂ.615/2010</u>

ಫಿರ್ಯಾದುದಾರ: ಕರ್ನಾಟಕ ಸರ್ಕಾರ
ಪ್ರತಿನಿಧಿಸುವವರು: ಕೆಂಪಾಪುರ ಪೋಲೀಸ್‌ಠಾಣೆ

ವಿರುದ್ಧ

ಆರೋಪಿಗಳು: ಶಿವಣ್ಣ
ತಂದೆ ರಾಮಣ್ಣ
ವಯಸ್ಸು 40 ವರ್ಷ
ಶಾಂತಿನಗರ, ಕೆ.ಎಂ.ಪುರ

**<u>ಪ್ರಕರಣದ ಸಂಗತಿಗಳು:</u>**

ದಿನಾಂಕ 2.9.2010ರಂದು ಸಂಜೆ 7.45 ಗಂಟೆಗೆ ಕೆ.ಎಂ.ಪುರ ತಾಲೂಕಿನ ಶಾಂತಿನಗರದ ವಾಸಿ 18 ವರ್ಷ ವಯಸ್ಸಿನ ಸುಭಾಷ್‌ನ ಮಗನಾದ ನಾಗರಾಜನು ದಿನಾಂಕ 2.9.2010ರಂದು ಮಧ್ಯಾಹ್ನ 1.00 ಗಂಟೆಗೆ

ಫಿರ್ಯಾಧಿ ನಾಗರಾಜ ಮತ್ತು ಆತನ ಕೆಲಸದಾಳು ಸುಬ್ಬನ ಜೊತೆಗೆ ತನ್ನ ಮನೆಯ ಹತ್ತಿರ ಇರುವ ಹಲಸಿನ ಹಣ್ಣಿನ ಮರಕ್ಕೆ ಹತ್ತಿ ಕೊಂಬೆಗಳನ್ನು ಕೊಯ್ಯುತ್ತಿದ್ದಾಗ ಆರೋಪಿ ಶಿವಣ್ಣ ಕೈಯ್ಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಬಂದನು ಮತ್ತು ಫಿರ್ಯಾಧಿಗೆ ಕೈಗಳಿಂದ ಹೊಡೆಯಲು ಪ್ರಾರಂಭಿಸಿದನು, ಅವನನ್ನು ಬಿಡಿಸಲು ಆತನ ತಾಯಿ ಸಾವಿತ್ರಮ್ಮ ಬಂದಾಗ ಆಕೆಗೆ ಕತ್ತಿಯಿಂದ ಹಲ್ಲೆ ಮಾಡಿ ಎಡಕೈಗೆ ರಕ್ತ ಬರುವ ಗಾಯವನ್ನುಂಟುಮಾಡಿದನು ಎಂದು ಆಪಾದಿಸಿ ರಾಮಣ್ಣನ ಮಗನಾದ ಶಿವಣ್ಣನ ವಿರುದ್ಧ ಕೆಂಪಾಪುರ ಪೋಲೀಸ್ ಠಾಣೆಗೆ ತನ್ನ ತಾಯಿ ಸಾವಿತ್ರಮ್ಮನ ಜೊತೆಗೆ ಹೋಗಿ ಪೋಲೀಸ್ ಉಪನಿರೀಕ್ಷಕರಿಗೆ ಒಂದು ಲಿಖಿತ ದೂರನ್ನು ನೀಡಿರುತ್ತಾನೆ.

ನಾಗರಾಜನ ಆ ದೂರಿನನ್ವಯ ಪೋಲೀಸ್ ಉಪನಿರೀಕ್ಷಕರು ಆರೋಪಿ ಶಿವಣ್ಣನ ವಿರುದ್ಧ ಭಾರತ ದಂಡ ಸಂಹಿತೆಯ ಕಲಂ 323 ಮತ್ತು 324ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧದ ಬಗ್ಗೆ ಕ್ರೈಂ ನಂ.36/2010ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ಅವರು ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಕೆ.ಎಂ.ಪುರ ರವರಿಗೆ ಪ್ರಥಮ ವರ್ತಮಾನ ವರದಿಯನ್ನು ರವಾನಿಸಿ, ತನಿಖೆಯನ್ನು ಮಾಡಿ, ತನಿಖೆ ಪೂರ್ಣಗೊಂಡ ನಂತರ ಆರೋಪಿ ವಿರುದ್ಧ ಭಾರತ ದಂಡ ಸಂಹಿತೆ, 1860ರ ಕಲಂ 323 ಮತ್ತು 324ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧದ ಬಗ್ಗೆ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಲಾಗಿತ್ತು. ಆರೋಪಿಯು ಆರೋಪವನ್ನು ಒಪ್ಪಿಕೊಂಡಿರುವುದಿಲ್ಲ.

ಆರೋಪಿ ವಿರುದ್ಧ ಮಾಡಿದ ಆರೋಪಣೆಯನ್ನು ರುಜುವಾತು ಮಾಡಲು ಮಾನ್ಯ ಮ್ಯಾಜಿಸ್ಟ್ರೇಟ್ ಮುಂದೆ ವಿಚಾರಣೆಯಲ್ಲಿ ಅಭಿಯೋಜನೆಯು ಫಿರ್ಯಾದಿ ನಾಗರಾಜ, ಅತನ ತಾಯಿ ಸಾವಿತ್ರಮ್ಮ, ವೈದ್ಯಕೀಯ ಸಾಕ್ಷಿ ಡಾ.ಅನುಭವ್ ಮತ್ತು ತನಿಖಾಧಿಕಾರಿಯವರನ್ನು ಪ್ರಾ.ಸಾ.1, ಪ್ರಾ.ಸಾ2, ಪ್ರಾ.ಸಾ.3 ಮತ್ತು ಪ್ರಾ.ಸಾ.4 ಎಂದು ಕ್ರಮವಾಗಿ ಸಾಕ್ಷಿ ವಿಚಾರಣೆ ಮಾಡಿರುತ್ತಾರೆ.

<u>ಪ್ರಾ.ಸಾ.1–ನಾಗರಾಜ</u> ದಿನಾಂಕ 16.08.2011ರಂದು ಪ್ರಮಾಣ ಮಾಡಿಸಲಾಯಿತು
<u>ಮುಖ್ಯವಿಚಾರಣೆ: ಎ.ಪಿ.ಪಿ.ಯವರಿಂದ:</u>

ಕೆ.ಎಂ.ಪುರ ತಾಲೂಕಿನ ಶಾಂತಿನಗರದಲ್ಲಿರುವ ಮನೆಯಲ್ಲಿ ನನ್ನ ಹೆತ್ತವರ ಜೊತೆಗೆ ವಾಸವಿದ್ದೇನೆ. ಅದು ಕೆಂಪಾಪುರ ಪೋಲೀಸು ಠಾಣೆಯಿಂದ ಮೂರು ಕಿ.ಮೀ. ಅಂತರದಲ್ಲಿದೆ. ನನ್ನ ಮನೆ ಹತ್ತಿರ ಒಂದು ಹಲಸಿನ ಹಣ್ಣಿನ ಮರ ಇದೆ. ಘಟನೆ ನಡೆದ ದಿನ ಮಧ್ಯಾಹ್ನ 1.00 ಗಂಟೆಗೆ ನಾನು ಮತ್ತು ನನ್ನ ಕೆಲಸದಾಳು ಸುಬ್ಬ ಆ ಮರದಿಂದ ಕೊಂಬೆಗಳನ್ನು ಕತ್ತರಿಸಲು ತೊಡಗಿದ್ದೆವು. ನಾವಿಬ್ಬರು ಮರವನ್ನು ಹತ್ತಿದ್ದೆವು. ಆಗ

ಆರೋಪಿ ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಬಂದನು ಮತ್ತು "ಆ ಮರ ನನಗೆ ಸೇರಿದ್ದು, ನೀವು ಯಾಕೆ ಅದರ ಕೊಂಬೆಗಳನ್ನು ಕತ್ತರಿಸುತ್ತೀರಿ?" ಎಂದು ನನ್ನನ್ನು ಉದ್ದೇಶಿಸಿ ಬಯ್ಯಲು ಪ್ರಾರಂಭಿಸಿದನು. ನಾನು ಮರದಿಂದ ಕೆಳಗೆ ಇಳಿಯಲು ಪ್ರಾರಂಭಿಸಿದೆನು. ಆಗ ಆರೋಪಿ ಕೈಗಳಿಂದ ನನಗೆ ಹಲ್ಲೆ ಮಾಡಿದನು. ನನಗೆ ಹೊಡೆಯುವುದರಿಂದ ತಪ್ಪಿಸಲು ನನ್ನ ತಾಯಿ ಆ ಜಾಗಕ್ಕೆ ಬಂದರು ಮತ್ತು ತಪ್ಪಿಸಲು ಪ್ರಯತ್ನಿಸಿದರು. ಆಗ ಆರೋಪಿ ಕತ್ತಿಯಿಂದ ನನ್ನ ತಾಯಿಯ ಎಡಕೈಗೆ ಹಲ್ಲೆ ಮಾಡಿದನು ಮತ್ತು ಮಣಿಕಟ್ಟಿಗೆ ಕತ್ತರಿಸಿದ ಗಾಯ ಮಾಡಿದನು. ಹಾಗೆ ತಾಯಿಗೆ ಹಲ್ಲೆ ಮಾಡಿ ಆ ಜಾಗದಿಂದ ಹೊರಟು ಹೋದನು.

ನಂತರ ಅದೇ ದಿನ ಅಂದರೆ 2.9.2010ರಂದು ಸಂಜೆ 7.45 ಗಂಟೆಗೆ ನಾನು ಮತ್ತು ನನ್ನ ತಾಯಿ ಇಬ್ಬರು ಕೆಂಪಾಪುರ ಪೋಲೀಸು ಠಾಣೆಗೆ ಹೋದೆವು ಮತ್ತು ಆರೋಪಿ ವಿರುದ್ಧ ಪಿ.ಎಸ್.ಐ.ರವರಿಗೆ ನನ್ನ ಲಿಖಿತ ದೂರನ್ನು ಕೊಟ್ಟೆನು. ನಿಶಾನೆ ಪಿ.1 ಫಿರ್ಯಾದಿಯಾಗಿದೆ. ನಾನು ಅದಕ್ಕೆ ಸಹಿ ಮಾಡಿದ್ದೇನೆ, ಅದು ನಿಶಾನೆ ಪಿ.1(ಎ). ಪಿ.ಎಸ್.ಐ.ರವರು ನನ್ನ ತಾಯಿಯನ್ನು ಆಸ್ಪತ್ರೆಗೆ ಕಳುಹಿಸಿದರು. ಎಂ.ಒ.1 ಆ ಕತ್ತಿಯಾಗಿದೆ.

ಮರುದಿನ ಬೆಳಿಗ್ಗೆ ಪಿ.ಎಸ್.ಐ. ಘಟನಾ ಸ್ಥಳಕ್ಕೆ ಭೇಟಿ ನೀಡಿದರು ಮತ್ತು ಇಬ್ಬರು ಪಂಚರ ಸಮಕ್ಷಮ ವಿಚಾರಣೆ ಮಾಡಿದರು. ನಾನು ಆ ಸ್ಥಳವನ್ನು ತೋರಿಸಿದೆನು. ಎಂ.ಒ.1 ಆ ಸ್ಥಳದಲ್ಲಿ ಬಿದ್ದಿತ್ತು. ಪಿ.ಎಸ್.ಐ.ರವರು ಸ್ಥಳ ಮಹಜರ್ ಅಂದರೆ ಪಂಚನಾಮೆಯನ್ನು ಮಾಡಿದರು. ಅದು ನಿಶಾನೆ ಪಿ.2 ಆಗಿದೆ ಮತ್ತು ಎಂ.ಒ.1ನ್ನು ಅಮಾನತು ಪಡಿಸಿಕೊಂಡರು.

<u>ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ ಪಿ ಕೆ ವಕೀಲರಿಂದ:</u>

ಆರೋಪಿ ನನ್ನ ಚಿಕ್ಕಪ್ಪ. ನನ್ನ ಮನೆ ಸ್ವತ್ತಿಗೆ ತಾಗಿರುವ ಕೃಷಿ ಸ್ವತ್ತು ಆರೋಪಿಗೆ ಸೇರಿದ್ದು. ಅದು ಅವನ ವೈಯಕ್ತಿಕ ಸಾಗುವಳಿಯಲ್ಲಿದೆ. ಈ ಎರಡು ಆಸ್ತಿಗಳ ಮಧ್ಯೆ ವಿಭಾಗಿಸಲು ಒಂದು ಬದು ಹಾದು ಹೋಗಿದೆ. ಸದರಿ ಹಲಸಿನ ಹಣ್ಣಿನ ಮರವು ಬದುವಿನ ಒಂದು ಬದಿಯಲ್ಲಿದೆ ಎಂದರೆ ನಿಜ. ನನ್ನ ಹೆತ್ತವರು ಮತ್ತು ಆರೋಪಿ ಮಧ್ಯೆ ಜಮೀನಿಗೆ ಸಂಬಂಧಪಟ್ಟ ವಿವಾದವಿದೆ. ಆ ಮರ ಆರೋಪಿಯ ಜಮೀನಿನಲ್ಲಿ ಇದೆ ಎಂದರೆ ನಿಜ.

ಆರೋಪಿ ನನ್ನ ಕೆಲಸದಾಳು ಸುಬ್ಬನಿಗೆ ಬೈದಿಲ್ಲ. ಮೊದಲಿಗೆ ಆರೋಪಿ ನನಗೆ ಹೊಡೆಯಲು ಯತ್ನಿಸಿದಾಗ ನಾನು ಮರದಿಂದ ಕೆಳಗೆ ಇಳಿಯುತ್ತಿದ್ದೆನು. ಆರೋಪಿಗೆ ನನ್ನನ್ನು ಹೊಡೆಯುವ ಉದ್ದೇಶವಾಗಲೀ ಅಥವಾ ನನ್ನ ತಾಯಿ ಸಾವಿತ್ರಮ್ಮನಿಗೆ ಕತ್ತಿಯಿಂದ ಹಲ್ಲೆ ಮಾಡಿದ್ದಾಗಲೀ ಇಲ್ಲ ಎಂದು ಸೂಚಿಸುವುದು ನಿಜವಲ್ಲ.

ಎಂ.ಒ.1ರಂತಹ ಕತ್ತಿ ನಮ್ಮ ಮನೆಯಲ್ಲಿ ಲಭ್ಯವಿದೆ. ಆರೋಪಿ ಕತ್ತಿಯನ್ನು ತಂದಿದ್ದಾಗಲೀ ಮತ್ತು ಆ ಸ್ಥಳದಲ್ಲಿ ಬಿಟ್ಟಿದ್ದಾಗಲೀ ಇಲ್ಲ ಎಂದು ಸೂಚಿಸುವುದು ನಿಜವಲ್ಲ. ನಮ್ಮ ಸ್ವತ್ತಿನಲ್ಲಿ ನನ್ನ ತಾಯಿ ಪೊದೆಯನ್ನು

ಕತ್ತರಿಸುವಾಗ ಮತ್ತು ಸ್ವಚ್ಛ ಮಾಡುವಾಗ ಆಕಸ್ಮಿಕವಾಗಿ ಎಂ.ಒ.1 ಕತ್ತಿ ತಾಗಿ ನನ್ನ ತಾಯಿ ಗಾಯಗೊಂಡರು ಎಂದು ಸೂಚಿಸುವುದು ನಿಜವಲ್ಲ.

ನಾವು ಕೆಂಪಾಪುರಕ್ಕೆ ನಮ್ಮ ಗ್ರಾಮದಿಂದ ಬಸ್ಸಿನಲ್ಲಿ ಬಂದೆವು. ನಮ್ಮ ಗ್ರಾಮದ ಮುಖಾಂತರ ಹಲವಾರು ಬಸ್ಸುಗಳು ಕೆಂಪಾಪುರಕ್ಕೆ ಓಡಾಡುತ್ತವೆ. ನಿಶಾನೆ ಪಿ.1ನ್ನು ದಿನಾಂಕ 2.9.2010ರಂದು ನಾನು ಕೊಟ್ಟಿದಲ್ಲ ಎಂದು ಸೂಚಿಸುವುದು ನಿಜವಲ್ಲ. ಆರೋಪಿಯ ವಿರುದ್ಧ ದ್ವೇಷದಿಂದ ನಿಶಾನೆ ಪಿ.1ರಂತಹ ಸುಳ್ಳು ದೂರನ್ನು ಕೊಟ್ಟಿದ್ದೇನೆಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ: ಇಲ್ಲ

ಓ.ಹೇ.ಕೆ.ಸರಿಯಿದೆ
ಸಹಿ/-
ಜೆ.ಎಮ್.ಎಫ್.ಸಿ.

ಪ್ರಾ.ಸಾ.2 – ಸಾವಿತ್ರಮ್ಮ                ದಿನಾಂಕ 16.08.2011ರಂದು ಪ್ರಮಾಣ ಮಾಡಿಸಲಾಯಿತು
ಮುಖ್ಯವಿಚಾರಣೆ: ಎ.ಪಿ.ಪಿ.ಯವರಿಂದ:

ಪ್ರಾ.ಸಾ.1 ನಾಗರಾಜ ನನ್ನ ಮಗ. ಘಟನೆಯಾಗುವ ಕಾಲಕ್ಕೆ ನಾನು ನಮ್ಮ ಮನೆಯ ಹೊರಗಡೆ ನಿಂತಿದ್ದೆನು. ಪ್ರಾ.ಸಾ.1 ಮತ್ತು ನಮ್ಮ ಕೆಲಸದಾಳು ಸುಬ್ಬ ನಮ್ಮ ಸ್ವತ್ತಿನಲ್ಲಿರುವ ಹಲಸಿನ ಹಣ್ಣಿನ ಮರದ ಕೊಂಬೆಗಳನ್ನು ಕತ್ತರಿಸುತ್ತಿದ್ದರು. ಆರೋಪಿ ನೆರೆಯ ಜಮೀನಿನಿಂದ ಬಂದನು ಮತ್ತು ಆ ಮರ ಅವನ ಜಮೀನಿನಲ್ಲಿದೆ ಮತ್ತು ಅವನಿಗೆ ಸೇರಿದ್ದು ಎಂದು ಜಗಳ ಮಾಡಲು ಪ್ರಾರಂಭಿಸಿದನು. ನಾಗರಾಜ ಮತ್ತು ಸುಬ್ಬ ಮರದಿಂದ ಕೆಳಗಿಳಿಯಲು ಪ್ರಾರಂಭಿಸಿದರು. ಆರೋಪಿ ನನ್ನ ಮಗನಿಗೆ ಹಲ್ಲೆ ಮಾಡಲು ಯತ್ನಿಸಿದನು. ನನ್ನ ಮಗನಾದ ನಾಗರಾಜನಿಗೆ ಹಲ್ಲೆ ಮಾಡುವುದರಿಂದ ತಪ್ಪಿಸಲು ಮಧ್ಯೆ ಪ್ರವೇಶಿಸಿದೆನು. ಆಗ ಅವನು ನನ್ನ ಎಡಕೈಗೆ ಕತ್ತಿಯಿಂದ ಕೂಡಲೆ ಹಲ್ಲೆ ಮಾಡಿದನು. ನನ್ನ ಎಡ ಮೊಣಕಟ್ಟಿಗೆ ರಕ್ತ ಬರುವ ಗಾಯವಾಯಿತು. ಎಂ.ಒ.1 ಆ ಕತ್ತಿಯಾಗಿದೆ.

ಘಟನೆ ನಂತರ ನಾನು ಮತ್ತು ನಾಗರಾಜ ಕೆಂಪಾಪುರ ಪೋಲೀಸ್ ಠಾಣೆಗೆ ಭೇಟಿ ನೀಡಿದೆವು ಮತ್ತು ಪೋಲೀಸರಿಗೆ ನಮ್ಮ ದೂರನ್ನು ಕೊಟ್ಟೆವು. ಪೋಲೀಸರು ನನ್ನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳುಹಿಸಿದರು. ಆಸ್ಪತ್ರೆಯಲ್ಲಿ ನಾನು ವೈದ್ಯರಿಂದ ಚಿಕಿತ್ಸೆಗೆ ಒಳಗಾದೆ.

ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ ಪಿ ಕೆ ವಕೀಲರಿಂದ:

ಆರೋಪಿ ಕೈಯ್ಯಲ್ಲಿ ಕತ್ತಿ ಹಿಡಿದುಕೊಂಡು ಸ್ಥಳಕ್ಕೆ ಬಂದನು. ಆರೋಪಿ ನನಗೆ ಕತ್ತಿಯಿಂದ ಹಲ್ಲೆ ಮಾಡಿದಾಗ ನಾಗರಾಜ ಮರದಿಂದ ಕೆಳಗಿಳಿಯುತ್ತಿದ್ದನು. ಸುಬ್ಬ ಯಾವತ್ತೂ ನಮ್ಮ ಕೆಲಸದಾಳು ಅಲ್ಲ. ಅವನು ನಮ್ಮ ಗ್ರಾಮದಲ್ಲಿ ವಾಸವಿದ್ದಾನೆ. ಆರೋಪಿ ಕತ್ತಿ ಹಿಡಿದುಕೊಂಡು ಸ್ಥಳಕ್ಕೆ ಬಂದಿಲ್ಲ ಎಂದು ಸೂಚಿಸುವುದು

ನಿಜವಲ್ಲ. ಎಂ.ಒ.1 ಕತ್ತಿ ನಮಗೆ ಸೇರಿದ್ದು ಮತ್ತು ಆರೋಪಿಗೆ ಸೇರಿದ್ದಲ್ಲ ಎಂದು ಸೂಚಿಸುವುದು ನಿಜವಲ್ಲ. ಕತ್ತಿಯನ್ನು ಪೋಲೀಸರ ಮುಂದೆ ನಾವು ಹಾಜರುಪಡಿಸಿದೆವು ಎಂದು ಸೂಚಿಸುವುದು ನಿಜವಲ್ಲ.

ನಾನು ನಮ್ಮ ಜಮೀನಿನಲ್ಲಿ ಪೊದೆಯನ್ನು ಕತ್ತರಿಸುವಾಗ ಮತ್ತು ಸ್ವಚ್ಛ ಮಾಡುವಾಗ ಆಕಸ್ಮಿಕವಾಗಿ ಎಂ.ಒ.1 ಕತ್ತಿ ತಾಗಿ ನನಗೆ ಗಾಯವಾಗಿದೆ ಎಂದು ಸೂಚಿಸುವುದು ನಿಜವಲ್ಲ. ನಾನು ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದು ಸೂಚಿಸುವುದು ನಿಜವಲ್ಲ.

ಮರುವಿಚಾರಣೆ: ಇಲ್ಲ

ಓ.ಹೇ.ಕೆ.ಸರಿಯಿದೆ
ಸಹಿ/-
ಜೆ.ಎಮ್.ಎಫ್.ಸಿ.

<u>ಪ್ರಾ.ಸಾ.3-ಡಾ.ಅನುಭವ್</u> ದಿನಾಂಕ 06.09.2011ರಂದು ಪ್ರಮಾಣ ಮಾಡಿಸಲಾಯಿತು
<u>ಮುಖ್ಯವಿಚಾರಣೆ: ಎ.ಪಿ.ಪಿ.ಯವರಿಂದ:</u>

ನಾನು ಕೆ.ಎಂ.ಪುರ ಸರ್ಕಾರಿ ಆಸ್ಪತ್ರೆಯಲ್ಲಿ ಸಹಾಯಕ ಶಸ್ತ್ರಚಿಕಿತ್ಸಕನಾಗಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕ 2.9.2010ರಂದು ರಾತ್ರಿ 8.15 ಗಂಟೆಗೆ ಪ್ರಾ.ಸಾ.2 ಶ್ರೀಮತಿ ಸಾವಿತ್ರಮ್ಮ ಶಿವಣ್ಣ ಹಲ್ಲೆ ಮಾಡಿದ್ದರಿಂದ ಎಡಕೈಗೆ ಗಾಯಗೊಂಡು ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ತನ್ನ ಮಗನಾದ ನಾಗರಾಜನ ಜೊತೆಗೆ ಬಂದಿದ್ದರು. ನಾನು ಆಕೆಯನ್ನು ತಪಾಸನೆ ಮಾಡಿದಾಗ ಈ ಕೆಳಕಂಡ ಗಾಯವನ್ನು ಆಕೆಯ ಕೈಯಲ್ಲಿ ಗುರುತಿಸಿದೆನು.

"ಎಡ ಮಣಿಕಟ್ಟಿನ ಹಿಂಭಾಗದಲ್ಲಿ 1/2" x 1/2" ಅಳತೆಯ ಕೊರೆದ ಗಾಯ"

ಅದು ಸಾದ ಸ್ವರೂಪದ್ದಾಗಿತ್ತು. ಅದು ಎಂ.ಒ.1 ಕತ್ತಿಯಂತಹ ಆಯುಧದಿಂದ ಆಗಬಹುದು. ನಿಶಾನೆ ಪಿ.3 ನಾನು ತನಿಖಾಧಿಕಾರಿಗೆ ಕೊಟ್ಟಂತಹ ಪ್ರಾ.ಸಾ.2ರವರ ಗಾಯದ ಪ್ರಮಾಣ ಪತ್ರವಾಗಿದೆ.

<u>ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ ಪಿ ಕೆ ವಕೀಲರಿಂದ:</u>

ನಿಶಾನೆ ಪಿ.3ರಲ್ಲಿ ಗಾಯದ ವಯಸ್ಸನ್ನು ಟಿಪ್ಪಣಿಸಿಲ್ಲ. ಅಂತಹ ಗಾಯ ಹರಿತವಾದ ಅಂಚಿನ ಆಯುಧ ಅಥವಾ ವಸ್ತುವಿನಿಂದ ಆಗಬಹುದು. ಪೊದೆಯನ್ನು ಕತ್ತರಿಸುವಾಗ ಅಥವಾ ಸ್ವಚ್ಛ ಮಾಡುವ ಕೆಲಸದಲ್ಲಿ ತೊಡಗುವಾಗ ಆಕಸ್ಮಿಕವಾಗಿ ಎಂ.ಒ.1 ಕತ್ತಿ ಕೈಗೆ ತಾಗಿದರೆ ಅಂತಹ ಗಾಯ ಆಗಬಹುದು.

ಪ್ರಾ.ಸಾ.2ರವರ ಮೇಲಿನ ಗಾಯ ಗಂಭೀರ ಗಾಯವಲ್ಲ. ಎಂ.ಒ.1ರಿಂದ ಬಲವಾಗಿ ಹಲ್ಲೆ ಮಾಡಿದರೆ ಆಕೆಗೆ ಆದ ಗಾಯಕ್ಕಿಂತ ಹೆಚ್ಚಿನ ಗಂಭೀರ ಸ್ವರೂಪದ ಗಾಯ ಆಗಬಹುದು.

ಮರುವಿಚಾರಣೆ: ಇಲ್ಲ

ಓ.ಹೇ.ಕೆ.ಸರಿಯಿದೆ
ಸಹಿ/-
ಜೆ.ಎಮ್.ಎಫ್.ಸಿ.

ಪ್ರಾ.ಸಾ.4 – ಲಕ್ಷ್ಮೀ ನಾರಾಯಣ ದಿನಾಂಕ 06.09.2011ರಂದು ಪ್ರಮಾಣ ಮಾಡಿಸಲಾಯಿತು
ಮುಖ್ಯವಿಚಾರಣೆ: ಎ.ಪಿ.ಪಿ.ಯವರಿಂದ:

ನಾನು ಕಳೆದ ಮೂರು ವರ್ಷಗಳಿಂದ ಕೆಂಪಾಪುರ ಪೋಲೀಸು ಠಾಣೆಯಲ್ಲಿ ಪಿ.ಎಸ್.ಐ.ಯಾಗಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕ 2.9.2010ರಂದು ಸಂಜೆ 7.45ಗಂಟೆಗೆ ಪ್ರಾ.ಸಾ.1 ನಾಗರಾಜನು ತನ್ನ ತಾಯಿ ಪ್ರಾ.ಸಾ.2 ಸಾವಿತ್ರಮ್ಮನ ಜೊತೆಗೆ ಪೋಲೀಸು ಠಾಣೆಗೆ ಬಂದನು ಮತ್ತು ನಿಶಾನೆ ಪಿ.1ರಂತೆ ಲಿಖಿತ ದೂರನ್ನು ಕೊಟ್ಟನು. ಅದರ ಆಧಾರದ ಮೇರೆಗೆ ಆರೋಪಿ ವಿರುದ್ಧ ಭಾರತ ದಂಡ ಸಂಹಿತೆ 323 ಮತ್ತು 324ರಡಿಯಲ್ಲಿ ಕೆಂಪಾಪುರ ಪೋಲೀಸು ಠಾಣೆಯ ಕ್ರೈಂ ನಂ.36/2010ರಲ್ಲಿ ಪ್ರಕರಣವನ್ನು ನೊಂದಾಯಿಸಿದೆನು. ಪಿ.ಸಿ.313 ಜಯರಾಮನ ಮೂಲಕ ಕೆ.ಎಂ.ಪುರ ಮಾನ್ಯ ಜೆ.ಎಂ.ಎಫ್.ಸಿ.ರವರಿಗೆ ನಿಶಾನೆ ಪಿ.4ರಂತೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ರವಾನೆ ಮಾಡಿದೆನು. ನಂತರ ಪ್ರಾ.ಸಾ.2 ಸಾವಿತ್ರಮ್ಮನನ್ನು ಕೆ.ಎಂ.ಪುರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆನು. ವೈದ್ಯರ ತಪಾಸಣೆ ನಂತರ ನಾನು ವಿಚಾರಣೆ ಮಾಡಿ ಆಕೆಯ ಹೇಳಿಕೆಯನ್ನು ದಾಖಲಿಸಿದೆನು.

ಮರುದಿನ ಬೆಳಗ್ಗೆ ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿದೆನು ಮತ್ತು ರಾಮು ಮತ್ತು ಬಾಲು ಪಂಚರ ಸಮಕ್ಷಮ ಸ್ಥಳ ಪರಿಶೀಲನೆ ಮಾಡಿದೆನು. ಘಟನಾ ಸ್ಥಳವನ್ನು ಪ್ರಾ.ಸಾ.1 ನಮಗೆ ತೋರಿಸಿದನು. ಎಂ.ಒ.1 ಕತ್ತಿ ಸ್ಥಳದಲ್ಲಿ ಬಿದ್ದಿತ್ತು. ನಾನು ಸ್ಥಳ ಪಂಚನಾಮೆ ಅಂದರೆ ಮಹಜರನ್ನು ನಿಶಾನೆ ಪಿ.2ರಂತೆ ತಯಾರಿಸಿದೆನು ಮತ್ತು ಎಂ.ಒ.1ನ್ನು ಅಮಾನತ್ತು ಪಡಿಸಿಕೊಂಡೆನು. ನಂತರ ನಾನು, ಸುಬ್ಬ ಮತ್ತು ಪ್ರಾ.ಸಾ.1ರವರ ತಂದೆ ಸುಭಾಷ್‌ರವರನ್ನು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡೆನು.

ನಂತರ 20.9.2010ರಂದು ಆರೋಪಿಯನ್ನು ಅವನ ಗ್ರಾಮದಲ್ಲಿ ದಸ್ತಗಿರಿ ಮಾಡಿದೆನು ಮತ್ತು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲು ಮಾನ್ಯ ಮ್ಯಾಜಿಸ್ಟ್ರೇಟ್ ಮುಂದೆ ಹಾಜರು ಪಡಿಸಿದೆನು.

ದಿನಾಂಕ 20.11.2010ರಂದು ಪ್ರಾ.ಸಾ.3 ಡಾ.ಅನುಭವ್ ಅವರಿಂದ ನಿಶಾನೆ ಪಿ.3 ಗಾಯದ ಪ್ರಮಾಣ ಪತ್ರವನ್ನು ಸಂಗ್ರಹಿಸಿದೆನು. ತನಿಖೆ ಪೂರ್ಣಗೊಂಡಿದ್ದರಿಂದ ಅದೇ ದಿನ ಕೆ.ಎಂ.ಪುರ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ದೋಷಾರೋಪಣಾಪತ್ರವನ್ನು ಸಲ್ಲಿಸಿದೆನು.

ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ ಪಿ ಕೆ ವಕೀಲರಿಂದ:

ಮಾನ್ಯ ಮ್ಯಾಜಿಸ್ಟ್ರೇಟರ ಹಿಂಬರಹದಲ್ಲಿ ಕಂಡು ಬರುವಂತೆ ನಿಶಾನೆ ಪಿ.4 ಪ್ರಥಮ ವರ್ತಮಾನ ವರದಿಯನ್ನು ದಿನಾಂಕ 3.9.2010ರಂದು ಮಧ್ಯಾಹ್ನ 1.30 ಗಂಟೆಗೆ ಕೊಡಲಾಗಿತ್ತು. ಪ್ರಾ.ಸಾ.1 ರವರು ನಿಶಾನೆ ಪಿ.1ನ್ನು ದಿನಾಂಕ 3.9.2010ರಂದು ಬೆಳಗ್ಗೆ 11.00 ಗಂಟೆಗೆ ಕೊಟ್ಟಿದ್ದರು, ದಿನಾಂಕ 2.9.2010ರಂದು ಸಂಜೆ

7.45ಕ್ಕೆ ಅಲ್ಲ ಎಂದು ಸೂಚಿಸುವುದು ನಿಜವಲ್ಲ. ಘಟನಾ ಸ್ಥಳದಲ್ಲಿ ರಕ್ತ ಕಂಡು ಬರಲಿಲ್ಲ. ಹಲಸಿನ ಹಣ್ಣಿನ ಮರ ಚಾ.ಸಾ.1 ಮತ್ತು ಆರೋಪಿ ಸ್ವತ್ತಿನ ಮಧ್ಯೆ ಇರುವ ಬದುವಿನ ಬದಿಯಲ್ಲಿ ಇದೆ ಎಂದರೆ ನಿಜ. ಅದರ ಮಾಲೀಕರ ಬಗ್ಗೆ ಯಾವುದೇ ದಸ್ತಾವೇಜನ್ನಾಗಲೀ ಅಥವಾ ಖಾತಾ ಎಂಟ್ರಿಯನ್ನಾಗಲಿ ನೋಡಿಲ್ಲ. ಯಾರ ಆಸ್ತಿಯಲ್ಲಿ ಹಲಸಿನ ಹಣ್ಣಿನ ಮರ ಇದೆ ಎಂದು ನನಗೆ ಗೊತ್ತಿಲ್ಲ. ಘಟನಾ ಸ್ಥಳದ ಹತ್ತಿರ ಕಾಡು ಪೊದೆಗಳು ಇವೆ.

ನಾನು ಪ್ರಾ.ಸಾ.2 ಸಾವಿತ್ರಮ್ಮನನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟಿಲ್ಲ ಎಂದು ಸೂಚಿಸುವುದು ನಿಜವಲ್ಲ. ಪ್ರಾ.ಸಾ.1 ಮತ್ತು ಅವನ ಹೆತ್ತವರ ಕಾರಣದಿಂದ ನಾನು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದು ಸೂಚಿಸುವುದು ನಿಜವಲ್ಲ.

## ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ 313ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಮಾನ್ಯ ಮ್ಯಾಜಿಸ್ಟ್ರೇಟ್‌ರವರು ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ 313ರಡಿಯಲ್ಲಿ ಆರೋಪಿಯನ್ನು ವಿಚಾರಣೆ ಮಾಡಿರುತ್ತಾರೆ. ಆರೋಪಿಯು ಆರೋಪ ಹೊರಿಸುವ ಎಲ್ಲಾ ಸಂದರ್ಭಗಳನ್ನು ನಿರಾಕರಿಸಿರುತ್ತಾನೆ. ತನ್ನ ಜಮೀನಿನಲ್ಲಿ ಆ ಮರ ಇದ್ದುದ್ದರಿಂದ ಯಾಕೆ ಕೊಂಬೆಗಳನ್ನು ಕತ್ತರಿಸುತ್ತೀಯಾ ಎಂದು ಅವನು ಪ್ರಾ.ಸಾ.1ನ್ನು ಕೇಳಿಲ್ಲ ಎಂದು ಹೇಳಿದ್ದನು.

## ವಾದಗಳ ಮುಖ್ಯಾಂಶಗಳು

ಆಪಾದಿಸಿದ ಘಟನೆಯ ಮುಖ್ಯ ವಿವರಗಳ ಬಗ್ಗೆ ಪ್ರಾ.ಸಾ.1 ಮತ್ತು 2 ರವರ ಸಾಕ್ಷ್ಯವು ಸ್ಥಿರವಾಗಿದೆ ಮತ್ತು ಸತ್ವಯುತವಾಗಿದೆ ಎಂದು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ವಾದಿಸಿರುತ್ತಾರೆ. ರುಜುವಾತಾದ ನಿಶಾನೆ ಪಿ.1 ರಿಂದ 4 ದಸ್ತಾವೇಜುಗಳ ವಿಷಯಗಳು ಮತ್ತು ಪ್ರಾ.ಸಾ.3 ಮತ್ತು 4 ರವರ ಸಾಕ್ಷ್ಯವು ಪರಸ್ಪರ ಸಮರ್ಥನೀಯವಾಗಿದೆ. ಅದು ಎಲ್ಲಾ ಮುಖ್ಯ ದುರ್ಬಲತೆಯಿಂದ ಮುಕ್ತವಾಗಿದೆ. ಆದ್ದರಿಂದ ಆರೋಪಿ ಮೇಲೆ ಮಾಡಿದ ಆರೋಪವನ್ನು ಸಾಬೀತು ಪಡಿಸಲು ಅದು ಸಾಕಷ್ಟಾಗಿದೆ. ಆದುದರಿಂದ ಆರೋಪಿಯು ಅವನ ಮೇಲೆ ಆಪಾದಿಸಿದ ಅಪರಾಧಕ್ಕೆ ದೋಷಿಯಾಗಲು ಬಾಧ್ಯಸ್ಥನು ಎಂದು ವಾದಿಸಿರುತ್ತಾರೆ.

ಅಭಿಯೋಜನೆಯ ಸಾಕ್ಷ್ಯವು ಮುಖ್ಯ ಅಂಶಗಳಿಗೆ ಸಂಬಂಧಿಸಿದಂತೆ ವಿರೋಧಾತ್ಮಕವಾಗಿದೆ, ಲೋಪವಿದೆ ಮತ್ತು ವ್ಯತ್ಯಾಸವಿದೆ ಎಂದು ಆರೋಪಿ ಪರ ವಕೀಲರು ವಾದಿಸಿರುತ್ತಾರೆ. ಘಟನೆ ನಡೆದ ರೀತಿಯ ಬಗ್ಗೆ ಪ್ರಾ.ಸಾ.1ರವರ ಸಾಕ್ಷ್ಯವು ನಿಶಾನೆ ಪಿ.1 ದೂರಿಗೆ ವಿರೋಧಾತ್ಮಕವಾಗಿದೆ. ಪ್ರಾ.ಸಾ.1 ಮತ್ತು 2 ಘಟನೆಯ ಬಗ್ಗೆ ಹೇಳಿದ ಹೇಳಿಕೆಯು ಅಂತರ್ಗತವಾಗಿ ಅಸಂಭವನೀಯವಾಗಿದೆ. ಪ್ರಾ.ಸಾ.3 ಡಾ.ಅನುಭವ್‌ರವರ ಸಾಕ್ಷ್ಯವು ಅದನ್ನು ಪುಷ್ಟೀಕರಿಸುವುದಿಲ್ಲ ಮತ್ತು ಘಟನೆ ಬಗ್ಗೆ ಪ್ರತಿರಕ್ಷಣೆಯವರ ನಿರೂಪಣೆಯನ್ನು ಬೆಂಬಲಿಸುತ್ತದೆ.

ನಿಶಾನೆ ಪಿ.1 ಫಿರ್ಯಾದು ಮತ್ತು ನಿಶಾನೆ ಪಿ.4 ಎಫ್.ಐ.ಆರ್.ನ ಬರಹಗಾರರು ಮುಖ್ಯ ಸಾಕ್ಷಿದಾರರಾಗಿರುತ್ತಾರೆ. ಅವರನ್ನು ವಿಚಾರಣೆ ಮಾಡದೆ ಇರುವುದರಿಂದ ಅಭಿಯೋಜನೆಗೆ ಕಾನೂನಿನ ದೌರ್ಬಲ್ಯ ಉಂಟಾಗಿದೆ. ಅಭಿಯೋಜನೆ ಮಹಜರ್ ಸಾಕ್ಷಿದಾರರನ್ನು ವಿಚಾರಣೆ ಮಾಡಿಲ್ಲ. ಆದ್ದರಿಂದ ಘಟನಾ ಸ್ಥಳವನ್ನು ಅಭಿಯೋಜನೆ ರುಜುವಾತು ಮಾಡಿಲ್ಲ. ಆದ್ದರಿಂದ ಆರೋಪಿ ಮೇಲೆ ಮಾಡಿದ ಆರೋಪದಿಂದ ಆತನನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

*********

# HIGH COURT OF KARNATAKA
## ಕರ್ನಾಟಕ ಉಚ್ಚ ನ್ಯಾಯಾಲಯ

## CIVIL JUDGE MAIN WRITTEN EXAMINATION-2019
## ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ – 2019

## TRANSLATION PAPER
## ಭಾಷಾಂತರ ಪತ್ರಿಕೆ

Date: 30.03.2019
ದಿನಾಂಕ: 30ನೇ ಮಾರ್ಚ್ 2019

Max Marks: 100
ಗರಿಷ್ಠ ಅಂಕಗಳು : 100

Time: 10.00 AM to 1.00 PM
ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ

**Instruction:**

Write your register number only on the cover page in the space provided and nowhere else. You must not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

ನಿಮ್ಮ ರಿಜಿಸ್ಟರ್ ನಂಬರನ್ನು ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

**1. Translate the following deposition to Kannada language :** **Marks:15**

ಪ್ರಶ್ನೆ 1: ಈ ಕೆಳಕಂಡ ಸಾಕ್ಷಿ ಹೇಳಿಕೆಯನ್ನು ಕನ್ನಡ ಭಾಷೆಗೆ ಅನುವಾದಿಸಿ: ಅಂಕಗಳು: 15

**Examination in Chief By APP:**

CW1 is my wife. I know the accused. On 7.6.2017 at 4.00 p.m., the accused came near my house and abused us in filthy language. When my wife questioned the accused, the accused pulled the hands of CW1 and assaulted her on her cheeks with hands. I came and pacified the quarrel. The accused tried to assault my wife with stone. But she escaped from the blow. The

accused threatened to finish off our family. We went to the police station. Police sent us to hospital. After treatment, we went to police station and lodged a complaint. Police came to our house the next day. Police recorded my statement. There was a dispute between us and accused regarding landed property. With the said ill will, the accused had abused and assaulted my wife.

**Cross Examination by Sri.KBK Advocate for Accused:**

Police have not issued any notice to me. CW3 is my elder brother. I married Renuka about 24 years back. I have not seen my wife talking to accused. There is a Ganesha temple in our village. I do not know whether the temple is constructed about 12 years back. It is false to suggest that Sri Nagendra is my neighbour. It is false to suggest that Smt. Renuka has illicit affair with Sri Nagendra. It is false to suggest that the house of accused is situated opposite to my house. It is false to suggest that myself and my brothers had planned to abduct the wife of accused. It is true that the accused had lodged a complaint against me and 7 others and the case is pending before the Court. It is false to suggest that the accused has not abused my wife and not assaulted her with stone and hands. It is false to suggest that no such incident has taken place. It is false to suggest that in order to harass the accused, a false complaint is lodged.

**Re-examination: nil.**

(Typed to my dictation in Open Court)

R.I.O & A.C.,
Sd/-
Judicial Magistrate First Class

2. **Translate the following document to Kannada language**

**Marks: 15**

ಪ್ರಶ್ನೆ 2: ಈ ಕೆಳಕಂಡ ದಾಖಲೆಯನ್ನು ಕನ್ನಡ ಭಾಷೆಗೆ ಅನುವಾದಿಸಿ: ಅಂಕಗಳು: 15

This agreement for sale is executed by and between:

Mr.Raghavendra, aged 70 years,
S/o Keshavananda, residing at
Cauvery Nagar, K.M.Pura

hereinafter called as the Vendor of one part;

**TO AND IN FAVOUR OF**

Mr.Nagaraj, aged 45 years
S/o Bhojaraja, residing at
Kuvempunagar, K.M.Pura

hereinafter called as the Purchaser of other part;

**WHEREAS,** the vendor herein is the absolute owner of the house property morefully described in the schedule herebelow, hereinafter referred to as the schedule property. The schedule property was purchased by the vendor as per the terms of registered sale deed dated 6.6.2007 registered as document No.514/2007-2008 in the office of the Sub-Registrar, Cauvery Nagar. Even since then the vendor has been in actual possession and enjoyment of the schedule property as the absolute owner.

**WHEREAS,** the Vendor herein intended to sell the schedule poperty and the purchaser herein having come to know the desire of the vendor offered to purchase the schedule property for a total sale consideration of Rs.32,00,000/- (Rupees Thirty Two Lakhs only). Said offer of the purchaser was accepted by the Vendor as fair and reasonable Market Value of the schedule property.

**NOW THEREFORE THE AGREEMENT WITNESSETH AS FOLLOWS:**

1. The Vendor shall sell to the purchaser and the purchaser shall purchase from the Vendor the schedule property for a total consideration of Rs.32,00,000/- (Rupees Thirty Two Lakhs only)

2. Out of the total consideration, the purchaser has paid advance sale consideration of Rs.10,00,000/- (Rupees Ten Lakhs Only) to the Vendor by Demand Draft dated 17.1.2019 bearing No.176398 drawn on State Bank of India, K.P.Nagar and the Vendor herein admit and acknowledges the receipt of the same.

3. Balance amount of Rs.22,00,000/- shall be paid by the Purchaser to the Vendor at the time of execution and registration of the sale deed.

4. It is mutually agreed that the sale deed shall be executed by the Vendor in favour of the Purchaser within three months from the date of this agreement.

5. The Vendor shall produce all the required documents to the purchaser for verification well before the date of registration.

6. All expenses of the registration of the sale deed shall be borne by the purchaser.

**SCHEDULE**

Immovable property bearing Sy.No.26, measuring 60 x 50 feet with residential house bearing D.No.8/16 situated at Cauvery Nagar, K.M.Pura.

In witness whereof, the parties have signed this agreement for sale on 18th day of January 2019 at Cauvery Nagar, K.M.Pura.

**VENDOR** **PURCHASER**

**WITNESSES:**

1.

2.

**3. Translate the following Passage as extracted from a Judgment to Kannada language:** **Marks: 20**

ಪ್ರಶ್ನೆ 3: ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ. **ಅಂಕಗಳು: 20**

Once the tenancy right of the defendant is legally terminated, the defendant is bound to vacate the suit premises. Since, this is a suit for ejectment filed by terminating the tenancy under the provisions of the transfer of Property Act, this court need not consider question of plaintiff's requirement of the suit premises, hardship and inconvenience going to be caused to the defendant in case of his eviction from the suit premises. Irrespective of plaintiff's requirement of the suit premises and defendant's hardship and inconvenience, the defendant is bound to vacate the suit premises, once the defendant's tenancy rights are legally terminated. Therefore, I hold that the plaintiff is entitled for decree for ejectment of the defendant from the suit premises.

The plaintiff has also claimed the decree for recovery of arrears of rent to the tune of Rs.50,200/- being the arrears of rent from October 2014 till the date of filing this suit. When the plaintiff alleges that the defendant is in arrears of rent, burden is upon the defendant to prove the payment of rent. But, the defendant has not come before this court to deny the rate of rent or to prove the payment of rent to the plaintiff. The evidence let in by the plaintiff in this regard remained unchallenged and undisputed. Therefore, plaintiff is entitled for the decree for recovery of Rs.50,200/-, being the arrears of rent, from October 2014 to the date of filing the suit.

**4. Translate the following deposition to English language :** **Marks:15**

ಪ್ರಶ್ನೆ 4: ಈ ಕೆಳಕಂಡ ಸಾಕ್ಷಿ ಹೇಳಿಕೆಯನ್ನು ಆಂಗ್ಲ ಭಾಷೆಗೆ ಅನುವಾದಿಸಿ. ಅಂಕಗಳು : 15

ಮುಖ್ಯ ವಿಚಾರಣೆ : ವಾದಿ ಪರ ವಕೀಲರಿಂದ :-

ನನಗೆ ಪ್ರತಿವಾದಿ ಮತ್ತು ಆತನ ಮಾರಾಟಗಾರರು ಗೊತ್ತಿದೆ. ಅವನ ಮಾರಾಟಗಾರರ ಸಹೋದರರು ನನ್ನ ಮಾರಾಟಗಾರರು. ನಾನು ದಾವಾ ಜಮೀನನ್ನು ಹತ್ತು ವರ್ಷಗಳ ಹಿಂದೆ ಶಿವಣ್ಣ, ಬಸಪ್ಪ ಮತ್ತು ಲಿಂಗಪ್ಪನವರಿಂದ ಖರೀದಿ ಮಾಡಿದ್ದೇನೆ. ಅವರು ನನಗೆ ನೊಂದಾಯಿತ ಕ್ರಯಪತ್ರವನ್ನು ಬರೆದುಕೊಟ್ಟರು. ದಾವಾ ಸೊತ್ತಿನ ಒಟ್ಟು ವಿಸ್ತೀರ್ಣ 1 ಎಕರೆ 25 ಗುಂಟೆಗಳು. ಸರ್ವೆ ನಂಬ್ರ 44ರಲ್ಲಿ 5 ಗುಂಟೆ ಖರಾಬ್ ಜಮೀನು ಇದೆ. ಮಾರಾಟ ಮಾಡಿದ ದಿನಾಂಕದಂದು ನನ್ನ ಮಾರಾಟಗಾರರು ದಾವಾ ಜಮೀನನ್ನು ಸ್ವಾಧೀನಕ್ಕೆ ವಹಿಸಿಕೊಟ್ಟರು. ನಿಶಾನೆ ಪಿ.1 ಅವರು ಬರೆದುಕೊಟ್ಟ ಕ್ರಯಪತ್ರವಾಗಿದೆ. ನಾನು ಪೂರ್ತಿ ದಾವಾ ಜಮೀನಿನ ಸ್ವಾಧೀನದಲ್ಲಿದ್ದೇನೆ. ದಾವಾ ಜಮೀನಿನಲ್ಲಿ 20 ತೆಂಗಿನ ಮರಗಳು ಇವೆ. ದಾವಾ ಹಾಕಿದ ದಿನಾಂಕದಂದು ಭಾಗಶಃ ದಾವಾ ಜಮೀನಿನಲ್ಲಿ ರಾಗಿ ಬೆಳೆ ಇತ್ತು. ನಿಶಾನೆ ಪಿ 2 ರಿಂದ 4 ಆರ್.ಟಿ.ಸಿ.ಗಳಾಗಿವೆ. ನಿಶಾನೆ 5 ರಿಂದ 8 ಕಂದಾಯ ರಶೀದಿಗಳಾಗಿವೆ. ಪ್ರತಿವಾದಿಗೆ ದಾವಾ ಜಮೀನಿನಲ್ಲಿ ಯಾವುದೇ ರೀತಿಯ ಹಕ್ಕು, ಸ್ವಾಮ್ಯತೆ ಅಥವಾ ಹಿತಾಸಕ್ತಿ ಇರುವುದಿಲ್ಲ. ನಾನು ದಾವಾ ಜಮೀನನ್ನು ಸರ್ವೇಯರಿಂದ ಅಳತೆ ಮಾಡಿಸಿ ಗಡಿ ಗುರುತು ಮಾಡಿಕೊಂಡಿದ್ದೇನೆ. ಪ್ರತಿವಾದಿ

ವಿನಾಕಾರಣ ನನ್ನ ಸ್ವಾಧೀನಕ್ಕೆ ಅಡ್ಡಿಪಡಿಸುತ್ತಿದ್ದಾನೆ. ಆದ್ದರಿಂದ ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

<u>ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ:</u>

ಈರಪ್ಪ ನನ್ನ ಮಾರಾಟಗಾರರ ಹಿರಿಯ ಸಹೋದರ. ಅವರ ತಾಯಿ ಶಿವಮ್ಮ ಜೀವಂತವಿದ್ದಾರೆ. ಎಲ್ಲಾ ಸಹೋದರರು ಕುಟುಂಬದ ಸ್ವತ್ತನ್ನು ಪಾಲು ಮಾಡಿಕೊಂಡಿದ್ದಾರೆ. ಸರ್ವೆ ನಂಬ್ರ 43 ಮತ್ತು 44ರಲ್ಲಿ ಒಂದು ಎಕರೆ ಜಮೀನು ಈರಪ್ಪನ ಪಾಲಿಗೆ ಹೋಗಿದೆಯೋ ಎಂದು ನನಗೆ ಗೊತ್ತಿಲ್ಲ. ಪಾಲು ಪತ್ರದಂತೆ ಸ.ನಂಬ್ರ 43 ಮತ್ತು 44ರಲ್ಲಿ ಒಂದು ಎಕರೆ ಜಮೀನುಗಳು ಬಸಪ್ಪ ಮತ್ತು ಶಿವಣ್ಣನ ಹೆಸರಿಗೆ ಹೋಗಿದೆ. ಈರಪ್ಪನು ಪ್ರತಿವಾದಿಗೆ ಮಾರಾಟ ಮಾಡಿದ ಜಮೀನಿನ ವಿಸ್ತೀರ್ಣ ಗೊತ್ತಿಲ್ಲ. ಸರ್ವೆ ನಂಬ್ರ 44ರಲ್ಲಿ ಈರಪ್ಪ ಪ್ರತಿವಾದಿಗೆ ಜಮೀನು ಮಾರಿದ್ದಾನೋ ಗೊತ್ತಿಲ್ಲ. ನಾನು ಸರ್ವೆ ನಂಬ್ರ 44ರಲ್ಲಿ ಶಿವಣ್ಣನಿಂದ 1 ಎಕರೆ ಮತ್ತು ಬಸಪ್ಪನಿಂದ 20 ಗುಂಟೆ ಜಮೀನನ್ನು ಖರೀದಿ ಮಾಡಿದ್ದೇನೆ ಎಂದು ಸೂಚಿಸುವುದು ನಿಜ. ಸರ್ವೆ ನಂಬ್ರ 43 ಮತ್ತು 44ರ ಒಟ್ಟು ವಿಸ್ತೀರ್ಣ 3 ಎಕರೆ 34 ಗುಂಟೆಗಳು ಎಂದರೆ ನಿಜ. ಸರ್ವೆ ನಂಬ್ರ 43 ಮತ್ತು 44ರ ಜಮೀನು ಶಿವಣ್ಣ, ಬಸಪ್ಪ ಮತ್ತು ಈರಪ್ಪನ ಪಾಲಿಗೆ ಹೋಗಿದೆ ಎಂದರೆ ನಿಜ. ನಾನು ದಾವಾ ಜಮೀನಿನ ಸ್ವಾಧೀನದಲ್ಲಿ ಇಲ್ಲ ಎಂದು ಸೂಚಿಸುವುದು ನಿಜವಲ್ಲ. ಪ್ರತಿವಾದಿ ದಾವಾ ಜಮೀನಿನ ಸ್ವಾಧೀನದಲ್ಲಿದ್ದಾನೆ ಎಂದು ಸೂಚಿಸುವುದು ನಿಜವಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸ. ಇದೆ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ

## 5. <u>Translate the following document to English language:</u>

**Marks: 15**

<u>ಪ್ರಶ್ನೆ 5: ಈ ಕೆಳಕಂಡ ದಾಖಲೆಯನ್ನು ಆಂಗ್ಲ ಭಾಷೆಗೆ ಅನುವಾದಿಸಿ:</u>

ಅಂಕಗಳು : 15

ಸನ್ ಸಾವಿರದ ವಂಭೈನೂರ ಎಂಬತ್ತೊಂದನೇ ಇಸವಿ ಡಿಸೆಂಬರ್ ಮಾಹೆ 9ನೇ ತಾರೀಖಿನಲ್ಲಿ ಬೆಂಗಳೂರು ಜಿಲ್ಲೆ, ಕಾವೇರಿ ನಗರದ ಜಿರಾಯಿತು ಕಸಬಿನ ಆನಂದಪ್ಪನವರ ಮಗ 49 ವರ್ಷ ವಯಸ್ಸಿನ ಚಿಕ್ಕಆನಂದಪ್ಪನಾದ ನಾನು ಬೆಂಗಳೂರು ಜಿಲ್ಲೆ, ಕುವೆಂಪುನಗರದ ಜಿರಾಯಿತು ಕಸಬಿನ ದೊಡ್ಡ ನಾರಾಯಣಪ್ಪನ ಮಗ ಸುಮಾರು 60 ವರ್ಷ ವಯಸ್ಸಿನ ಕೆಂಪಣ್ಣನಿಗೆ ಬರೆಮುಕೊಟ್ಟ ಶುದ್ಧ ಕ್ರಯ ಪತ್ರ

ಶೆಡ್ಯೂಲ್ ಜಮೀನುಗಳು ನನಗೆ ಪಿತ್ರಾರ್ಜಿತವಾಗಿ ಬಂದಿರುತ್ತೆ. ಈ ಶೆಡ್ಯೂಲ್ ಸ್ವತ್ತುಗಳನ್ನು ನನ್ನ ತಾತ ಓಂಕಾರಪ್ಪನವರು ನಾಗಸಂದ್ರದ ರಾಮಪ್ಪನ ಮಗ ಲೋಕಪ್ಪನಿಂದ ದಿನಾಂಕ 10.6.1949ರ ರಿಜಿಸ್ಟರ್ ಕ್ರಯಪತ್ರದ ಮೂಲಕ ಪಡೆದುಕೊಂಡು ಆಲಾಗಾಯ್ತು ಸ್ವಾಧೀನಾನುಭವ ಹೊಂದಿ ಆನಂತರ ನನ್ನ ಮೃತ ತಂದೆ ಮತ್ತು ನಾನು ಶೆಡ್ಯೂಲ್ ಸ್ವತ್ತನ್ನು ಅನುಭವಿಸಿಕೊಂಡು ಬರುತ್ತಿದ್ದೆವು, ನನ್ನ ತಂದೆಯ ಮರಣಾನಂತರ ನಾನೇ ಏಕೈಕ ವಾರಸುದಾರನಾಗಿ ಸಂಪೂರ್ಣ ಮಾಲೀಕತ್ವ ಮತ್ತು ಸ್ವಾಧೀನ ಹೊಂದಿಕೊಂಡು ನನ್ನ ದರದು ನಿಮಿತ್ತ ಅಂದರೆ ನಾನು ಒಂದು ಮನೆಯನ್ನು ಖರೀದಿ ಮಾಡುವ ಸಲುವಾಗಿ ಈ ಶೆಡ್ಯೂಲ್ ಸ್ವತ್ತನ್ನು ಒಂದು ಲಕ್ಷ ರೂಪಾಯಿಗಳಿಗೆ ಕ್ರಯ ಮಾಡಿಕೊಡಲು ದಿನಾಂಕ 10.4.1981ರಂದು ಒಪ್ಪಂದ ಮಾಡಿಕೊಟ್ಟಿದ್ದು ಆ ಸಮಯದಲ್ಲಿ ಐವತ್ತು ಸಾವಿರ ರೂಪಾಯಿ ಮುಂಗಡ ಹಣವನ್ನು ನಿಮ್ಮಿಂದ ಪಡೆದುಕೊಂಡಿರುತ್ತೇನೆ. ಉಳಿಕೆ ಕ್ರಯದ ಮೊಬಲಗನ್ನು ಸಬ್ ರಿಜಿಸ್ಟ್ರಾರ್‌ರವರ ಸಮಕ್ಷಮ ಪಡೆದುಕೊಳ್ಳುತ್ತೇನೆ. ಆದ್ದರಿಂದ ಈ ರೀತಿಯಾಗಿ ಕ್ರಯದ ಪ್ರತಿಫಲ ಪೂರ್ಣವಾಗಿ ಸಂದಾಯವಾಗಿರುತ್ತೆ.

ಶೆಡ್ಯೂಲ್ ಸ್ವತ್ತು ನನ್ನ ಸ್ವಾಧೀನದಲ್ಲಿದ್ದು ಈ ದಿನ ನಿಮ್ಮ ಸ್ವಾಧೀನಕ್ಕೆ ಬಿಟ್ಟುಕೊಟ್ಟಿರುತ್ತೇನೆ. ಈ ಲಾಗಾಯ್ತು ಶೆಡ್ಯೂಲ್ ಸ್ವತ್ತಿಗೆ ನೀವೇ ಸಂಪೂರ್ಣ ಮಾಲೀಕರಾಗಿ ವಂಶ ಪಾರಂಪರ್ಯ ಅನುಭವಿಸಿಕೊಂಡು ಹೋಗತಕ್ಕದ್ದು. ಈ ಸ್ವತ್ತಿನ ಮೇಲೆ ಯಾವ ವಿಧವಾದ ಆಧಾರ, ಭೋಗ್ಯ, ಜೀವನಾಂಶದ ಹಕ್ಕು ಇರುವುದಿಲ್ಲ ಎಂದು ಬರೆದುಕೊಟ್ಟ ಶುದ್ಧ ಕ್ರಯ ಪತ್ರ.

**6. <u>Translate the following passage as extracted from a judgment to English language:</u>** **Marks :20**

<u>ಪ್ರಶ್ನೆ 6: ಈ ಕೆಳಕಂಡ ತೀರ್ಪಿನ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:</u> ಅಂಕಗಳು :20

ಆರೋಪಿಯ ಅಪರಾಧಿತ್ವವನ್ನು ಸ್ಥಾಪಿಸಲು ಅಭಿಯೋಜನೆಯು ಒಟ್ಟು ಇಬ್ಬರು ಸಾಕ್ಷಿದಾರರನ್ನು ಅ.ಸಾ.1 ಮತ್ತು 2 ಎಂದು ವಿಚಾರಣೆಗೆ ಒಳಪಡಿಸಿರುತ್ತದೆ, ಅವರಲ್ಲಿ ಅ.ಸಾ.1 ರಮೇಶ ಮತ್ತು ಅ.ಸಾ.2 ರಾಮಪ್ಪನವರು ಪೋಲೀಸ್ ಅಧಿಕಾರಿಗಳಾಗಿದ್ದಾರೆ. ಅದು ಅಲ್ಲದೆ ಅಭಿಯೋಜನೆ ಒಟ್ಟು ಎಂಟು ದಾಖಲಾತಿಗಳನ್ನು ನಿಶಾನೆ ಪಿ.1 ರಿಂದ 8 ಎಂದು ಗುರುತಿಸಿಕೊಂಡಿರುತ್ತಾರೆ, ಅವುಗಳಲ್ಲಿ ನಿಶಾನೆ ಪಿ.1 ಪ್ರಥಮ ಮಾಹಿತಿ, ನಿಶಾನೆ ಪಿ.2 ಪ್ರಥಮ ವರ್ತಮಾನ ವರದಿ, ನಿಶಾನೆ ಪಿ.3 ಸ್ಥಳ ಮಹಜರು, ನಿಶಾನೆ ಪಿ.4 ಜಪ್ತುಮಹಜರಿನ ಪ್ರತಿ, ನಿಶಾನೆ 5 ರಿಂದ 8 ಆರೋಪಿಗಳ ಸ್ವ ಇಚ್ಛಾ ಹೇಳಿಕೆಗಳ ಪ್ರತಿಗಳಾಗಿವೆ. ಈ ಪ್ರಕರಣದಲ್ಲಿ ಸಾಕಷ್ಟು ಅವಕಾಶಗಳನ್ನು ಮಂಜೂರು ಮಾಡಿದ ನಂತರವೂ ಅಭಿಯೋಜನೆ ಪ್ರಥಮ ಮಾಹಿತಿದಾರ, ಸ್ಥಳ ಮಹಜರು ಮತ್ತು ಜಪ್ತಿ ಮಹಜರಿನ ಸ್ವತಂತ್ರ ಸಾಕ್ಷಿದಾರರನ್ನು ಕರೆಸಿಕೊಳ್ಳಲು ವಿಫಲವಾಗಿದೆ ಎನ್ನುವುದನ್ನು ಇಲ್ಲಿ ಹೇಳುವುದು ಖಂಡಿತವಾಗಿಯೂ ಯಥೋಚಿತವಾಗುತ್ತದೆ. ಅಭಿಯೋಜನೆಯು ಅಧಿಕಾರಿ ಸಾಕ್ಷಿದಾರರ ಸಾಕ್ಷವನ್ನು ಮಾತ್ರ ಅವಲಂಬಿಸಿದೆ ಎಂದು ಅರ್ಥವಾಗುತ್ತದೆ.

ಆರೋಪಿ ಪರ ವಕೀಲರು ಅಧಿಕಾರಿ ಸಾಕ್ಷಿದಾರರ ಪಾಟೀ ಸವಾಲಿನ ಸಮಯದಲ್ಲಿ ಆಪಾದಿಸಲಾದ ಪೋಲೀಸು ದಾಳಿ ಮತ್ತು 1 ರಿಂದ 3 ಆರೋಪಿತರ ಸ್ವಾಧೀನದಿಂದ ಗ್ಯಾಸ್ ಸಿಲಿಂಡರನ್ನು ವಶಪಡಿಸಿಕೊಂಡಿದ್ದನ್ನು ಪ್ರಶ್ನೆಗಳನ್ನು ಹಾಕಿ ನಿರಾಕರಿಸಿರುತ್ತಾರೆ ಮತ್ತು ಆರೋಪಿಗಳನ್ನು ಈ ಪ್ರಕರಣದಲ್ಲಿ ಸುಳ್ಳಾಗಿ ದೋಷಾರೋಪಣೆಯಲ್ಲಿ ಸಿಲುಕಿಸಿದ್ದಾರೆ ಎಂದು ನಿರ್ದಿಷ್ಟವಾಗಿ ಸೂಚಿಸಿರುತ್ತಾರೆ. ಆಪಾದಿಸಲಾದ ಪೋಲೀಸು ದಾಳಿ ಮತ್ತು ಗ್ಯಾಸ್ ಸಿಲಿಂಡರನ್ನು ಅಮಾನತು ಮಾಡಿಕೊಂಡಿದ್ದನ್ನು ಪ್ರತಿವಾದಿಸುವವರು ನಿರಾಕರಿಸಿದಾಗ ಕಳುವಾದ ಸ್ವತ್ತನ್ನು ವಶಪಡಿಸಿಕೊಂಡಿದ್ದನ್ನು ರುಜುವಾತುಪಡಿಸಲು ಅಮಾನತ್ತು ಮಹಜರಿನ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸುವುದು ಅಭಿಯೋಜನೆಗೆ ಬಿಟ್ಟಿದ್ದು. ಆದ್ದರಿಂದ ಈ ಪ್ರಕರಣದಲ್ಲಿ ಪ್ರಥಮ ಮಾಹಿತಿದಾರ ಮತ್ತು ಮಹಜರ್‌ನ ಮುಖ್ಯ ಸಾಕ್ಷಿದಾರರನ್ನು ವಿಚಾರಣೆ ಮಾಡದೇ ಇರುವುದರಿಂದ ಪ್ರತಿಕೂಲ ನಿರ್ಣಯವನ್ನು ಸೆಳೆಯಲು ಕಾರಣವಾಗುತ್ತದೆ. ಹಿತಾಸಕ್ತಿಯುಳ್ಳ ಅಧಿಕಾರಿ ಸಾಕ್ಷಿದಾರರ ಸಾಕ್ಷದ ಆಧಾರದ ಮೇಲೆ ಮಾತ್ರ ಅಭಿಯೋಜನೆ 1 ರಿಂದ 3 ಆರೋಪಿತರ ಮೇಲಿನ ಅಪರಾಧಿತ್ವವನ್ನು ಸ್ಥಾಪಿಸಿದೆ ಎಂದು ಹೇಳಲಾಗುವುದಿಲ್ಲ.

*********